ಕರ್ನಾಟಕ ವಿಧಾನಸಭೆ

ಹನ್ನೊಂದನೇ ವಿಧಾನಸಭೆಯ ಮೂರನೇ ಅಧಿವೇಶನ
26ನೇ ಫೆಬ್ರವರಿ 2001 ವಿಕ್ರಮ ಸಂವತ್ಸರ ಫಾಲ್ಗುಣ

ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ

ಸನ್ಮಾನ್ಯ ರಾಜ್ಯಪಾಲರು (ಶ್ರೀಮತಿ ವಿ.ಎಸ್. ರಮಾದೇವಿ) : ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತ ಅಧಿವೇಶನವನ್ನುದ್ದೇಶಿಸಿ ವಿಧಾನ ಸಭೆಯ ಸಭಾಂಗಣದಲ್ಲಿ ದಿನಾಂಕ 26ನೇ ಫೆಬ್ರವರಿ 2001ರ ಸೋಮವಾರದಂದು ಬೆಳಿಗ್ಗೆ 11.00ಗಂಟೆಗೆ ಮಾಡಿದ ಭಾಷಣ.

ರಾಜ್ಯಪಾಲರು ಬೆಳಿಗ್ಗೆ 10 ಗಂಟೆ 55 ನಿಮಿಷಕ್ಕೆ ವಿಧಾನಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರ ಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ಉಭಯ ಸದನಗಳ ಕಾರ್ಯದರ್ಶಿಗಳವರು ಸ್ವಾಗತಿಸಿದರು. ನಂತರ, ಪೂರ್ವ ಭಾಗದಲ್ಲಿರುವ ಮೆಟ್ಟಿಲುಗಳ ಮೂಲಕ ಮೊದಲನೇ ಮಹಡಿಗೆ ಆಗಮಿಸಿದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು,	ಕಾರ್ಯದರ್ಶಿಯವರು,
ವಿಧಾನ ಸಭೆ	ವಿಧಾನ ಪರಿಷತ್ತು
ಅಧ್ಯಕ್ಷರು	ಸಭಾಪತಿಯವರು

ರಾಜ್ಯಪಾಲರು : ಎ.ಡಿ.ಸಿ

ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಹೊರಟಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ರಾಜ್ಯಪಾಲರ ಆಗಮನಪನ್ನು ಪೂರ್ತಿಲ್ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನಪನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತುಕೊಂಡರು.

ಸಭಾಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯ ಇಬ್ಭಾಗವಾಯಿತು. ವೇದಿಕೆ ಮೇಲೆ ಮಾನ್ಯ ಅಧ್ಯಕ್ಷರು ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದ ಆಸನದಲ್ಲಿ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳವರು ವೇದಿಕೆಯ ಮುಂದಿರುವ ಆಸನದಲ್ಲಿ ಕುಳಿತುಕೊಂಡರು.

1. ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು :-

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ಕರ್ನಾಟಕ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲರನ್ನು ನಾನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ನನ್ನ ಸರ್ಕಾರವು ತನ್ನ ಅಧಿಕಾರದ ಒಂದು ವರ್ಷ ಐದು ತಿಂಗಳ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಕಳೆದ ಸಲ ಈ ವೇದಿಕೆಯಲ್ಲಿ ನಿಮ್ಮನ್ನು ಉದ್ದೇಶಿಸಿ ನಾನು ಭಾಷಣ ಮಾಡಿದ ನಂತರದ ವರ್ಷದಲ್ಲಿ ಅನೇಕ ಮಹತ್ವದ ಘಟನೆಗಳು ಜರುಗಿವೆ. ಸರ್ಕಾರವು ಬಂದ ಸವಾಲುಗಳನ್ನೆಲ್ಲಾ ಧೈರ್ಯ ಹಾಗೂ ತಾಳ್ಮೆಯಿಂದ ಎದುರಿಸಿ, ಪ್ರಗತಿ ಹಾಗೂ ಅಭಿವೃದ್ಧಿಯ ದಿಸೆಯಲ್ಲಿ ಮುನ್ನಡೆದಿದೆ.

2. ಗುಜರಾತ್‌ನಲ್ಲಿ ಸಂಭವಿಸಿದ ಭೂಕಂಪದ ಆಘಾತದಿಂದ ದೇಶವು ಇನ್ನೂ ಚೇತರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನಾವು ಸಭೆಸೇರಿದ್ದೇವೆ. ಈ ಭಯಂಕರ ದುರಂತದಲ್ಲಿ ಜೀವ ಹಾಗೂ ಆಸ್ತಿ ಪಾಸ್ತಿ ಕಳೆದುಕೊಂಡವರಿಗೆ ನಾವು ಮನಮಿಡಿದು ಅನುಕಂಪ ತೋರಿಸುತ್ತಿದ್ದೇವೆ. ಕರ್ನಾಟಕ ರಾಜ್ಯವು ಭೂಕಂಪ ಸಂತ್ರಸ್ತರಿಗೆ ತುರ್ತು ನೆರವು ನೀಡಲು ಸ್ಪಂದಿಸಿ ಮೊದಲು ವೈದ್ಯಕೀಯ ಪರಿಹಾರ ತಂಡವನ್ನು ನಂತರ ರಚನಾ ಇಂಜಿನಿಯರುಗಳ ತಂಡವನ್ನು ಕಳುಹಿಸಿ ಕೊಟ್ಟಿದೆ. ಭೂಕಂಪ ಪೀಡಿತ ಪ್ರದೇಶಗಳಲ್ಲಿ ಸಮಗ್ರ ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಬರುವ ಉದಾರ ದೇಣಿಗೆಗಳನ್ನು, ಸಾರ್ವಜನಿಕರು ಮತ್ತು ಸರ್ಕಾರಿ ನೌಕರರ ವಂತಿಗೆಯನ್ನು ಉಪಯೋಗಿಸಿಕೊಳ್ಳಲಾಗುವುದು.

3. ಡಾ. ರಾಜ್‌ಕುಮಾರ್ ಹಾಗೂ ಇತರ ಮೂವರನ್ನು ಕುಖ್ಯಾತ ಕಾಡುಗಳ್ಳ ವೀರಪ್ಪನ್, ಅಪಹರಿಸಿ ಕಾಡಿನಲ್ಲಿ ಬಂಧಿಸಿಟ್ಟಿದ್ದಾಗ ದಿನಾಂಕ 30-07-2000 ರಿಂದ 15-11-2000ದವರೆಗೆ ಕರ್ನಾಟಕ ರಾಜ್ಯವು ಆತಂಕ, ಕಳವಳವನ್ನು ಅನುಭವಿಸಿತು ಎಂಬುದು ತಮಗತಲ್ಲರಿಗೂ ಗೊತ್ತಿದೆ. ಈ ಪರಿಸ್ಥಿತಿಯನ್ನು ನನ್ನ ಸರ್ಕಾರವು ಅತ್ಯಂತ ಸಹನೆ ಮತ್ತು ತುಂಬಾ ಜಾಗರೂಕತೆಯಿಂದ ನಿಭಾಯಿಸಿತು. ಈ ಅಪಹರಣ ತಮಿಳುನಾಡು ರಾಜ್ಯದಲ್ಲಿ ಆಗಿದ್ದರಿಂದ, ಆ ಸರ್ಕಾರದ ಜೊತೆ ಆಗಾಗ್ಗೆ ಸಮಾಲೋಚನೆ ಮಾಡಲಾಯಿತು. ರಾಜ್ಯದ ಎಲ್ಲ ರಾಜಕೀಯ ಪಕ್ಷಗಳ ಮುಖಂಡರಿಗೆ ಆ ಘಟನೆಯ ಬೆಳವಣಿಗೆಗಳನ್ನು ತಿಳಿಸಲಾಗುತ್ತಿತ್ತು. ಅವರು ನೀಡಿದ ಸಲಹೆ ಮತ್ತು ಸಹಕಾರಗಳಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಆತಂಕದ ಅವಧಿಯಲ್ಲಿ ತುಂಬಾ ತಾಳ್ಮೆ, ಸಹನೆ ಸಹಾನುಭೂತಿ ತೋರಿ ಅತ್ಯಂತ ಸಂಯಮದಿಂದ ವರ್ತಿಸಿದ ಕರ್ನಾಟಕ ಮತ್ತು ತಮಿಳುನಾಡಿನ ಜನತೆಗೆ ನಾನು ಈ ಸಂದರ್ಭದಲ್ಲಿ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

4. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯು ಪೂರ್ಣ ನಿಯಂತ್ರಣದಲ್ಲಿದೆ. ಕಾನೂನು ಮತ್ತು ಸುವ್ಯವಸ್ಥೆಯ ತೀವ್ರ ಉಲ್ಲಂಘನೆ ಆಗಿಲ್ಲ ಅಥವಾ ಕೋಮು ಗಲಭೆಗಳು ಆಗಿಲ್ಲ. ಆದರೂ, ಚಿಂತಾಮಣಿ ತಾಲ್ಲೂಕು, ಕಂಬಾಳಪಲ್ಲಿಯಲ್ಲಿ ನಡೆದ ಘಟನೆಯಂಥ ಕೆಲವು ಘಟನೆಗಳಲ್ಲಿ ಪೊಲೀಸರು ಮಧ್ಯೆ ಪ್ರವೇಶಿಸಬೇಕಾಯಿತು. ಪೊಲೀಸರು ಸಕಾಲದಲ್ಲಿ ಕಾರ್ಯಪ್ರವೃತ್ತರಾಗಿ ಬಿಕ್ಕಟ್ಟು

ಮತ್ತಷ್ಟು ಬಿಗಡಾಯಿಸುವುದನ್ನು ತಡೆದರು. ಜೂನ್ ತಿಂಗಳಲ್ಲಿ ವಾಡಿ, ಹುಬ್ಬಳ್ಳಿ ಮತ್ತು ಬೆಂಗಳೂರು ಚರ್ಚ್‌ಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಮೂಲಭೂತವಾದಿಗಳ ಒಂದು ಪಂಥ ಶಾಮೀಲಾಗಿರುವ ಆತಂಕದ ಬೆಳವಣಿಗೆಯ ಗಮನಕ್ಕೆ ಬಂತು. ಪೂಲೀಸರ ತತ್‌ಕ್ಷಣದ ಹಾಗೂ ಸಂಘಟಿತ ಪ್ರಯತ್ನಗಳಿಂದಾಗಿ, ಕೋಮು ಭೇದ ಉಂಟುಮಾಡಲು ಸಂಚು ಹೂಡಿದ್ದ ಅಪರಾಧಿಗಳನ್ನು ಬಂಧಿಸಲು ಸಾಧ್ಯವಾಯಿತು.

5. ಹಲವು ವಿಷಯಗಳನ್ನು ಚರ್ಚಿಸಲು ನೀವು ಸಭೆ ಸೇರಿರುವ ಈ ಸಂದರ್ಭದಲ್ಲಿ ನನ್ನ ಸರ್ಕಾರದ ಮನದಲ್ಲಿ ರಾಜ್ಯದ ರೈತ ಸಮುದಾಯದ ಏಳ್ಗೆ ಮತ್ತು ಕ್ಷೇಮಾಭಿವೃದ್ಧಿ ಕುರಿತು ವಿಚಾರಗಳು ತುಂಬಿವೆ. 2000ದ ಸಾಲಿನಲ್ಲಿ ತುಂಬಾ ಒಳ್ಳೆಯ ಮುಂಗಾರು ಬೆಳೆ ಬಂದಿತು. ಇದರಿಂದ ಉತ್ಪಾದನೆ ಅದರಲ್ಲೂ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿತು. ರೈತರಿಗೆ ತಮ್ಮ ಉತ್ಪಾದನೆಗೆ ನ್ಯಾಯವಾದ ಕನಿಷ್ಠ ಬೆಲೆ ದೊರಕುವಂತೆ ಮಾಡಲು ಸರ್ಕಾರವು ಸಂಗ್ರಹಣಾ ಕಾರ್ಯಾಚರಣೆಗಳನ್ನು ಆರಂಭಿಸಿತು. ಕರ್ನಾಟಕದಲ್ಲಿ ಇದೇ ಮೊದಲನೆಯ ಬಾರಿಗೆ ಭಾರಿ ಪ್ರಮಾಣದಲ್ಲಿ ಸರ್ಕಾರವು ಪ್ರತಿ ಕ್ವಿಂಟಾಲಿಗೆ 445 ರೂ. ದರದಲ್ಲಿ ಮುಸುಕಿನ ಜೋಳ ಸಂಗ್ರಹಿಸುವ ಕಾರ್ಯವನ್ನು ಪ್ರಾರಂಭಿಸಿತು. ಫೆಬ್ರವರಿ 20ರ ವೇಳೆಗೆ ಆಗಲೇ ಸುಮಾರು 16 ಲಕ್ಷ ಕ್ವಿಂಟಾಲ್ ಮುಸುಕಿನ ಜೋಳವನ್ನು ಸಂಗ್ರಹಿಸಲಾಗಿದೆ. ರಾಗಿ ಸಜ್ಜೆ ಮತ್ತು ಜೋಳಗಳ ವಿಕೇಂದ್ರೀಕೃತ ಸಂಗ್ರಹಣಾ ಕಾರ್ಯವನ್ನೂ ಪ್ರಾರಂಭಿಸಲಾಗಿದೆ ಮತ್ತು ಆಹಾರ ಧಾನ್ಯಗಳ ಈ ಸಂಗ್ರಹಣಾ ಕಾರ್ಯವನ್ನು ಅವಶ್ಯವಿರುವವರೆಗೆ ಮುಂದುವರಿಸುತ್ತೇವೆ. ಪ್ರತಿ ಕ್ವಿಂಟಾಲ್‌ಗೆ 1550 ರೂ. ದರದಲ್ಲಿ ವಾಣಿಜ್ಯ ಆಧಾರದ ಮೇಲೆ ತೊಗರಿ ಸಂಗ್ರಹಣೆಯನ್ನು ಸಹಾ ಪ್ರಾರಂಭಿಸಲಾಗಿದೆ. ಈಗಾಗಲೇ 20,000 ಕ್ವಿಂಟಾಲ್‌ನಷ್ಟು ತೊಗರಿಯನ್ನು ಸಂಗ್ರಹಿಸಲಾಗಿದೆ. ಆಹಾರ ಧಾನ್ಯಗಳ ಜೊತೆಗೆ, ರಾಜ್ಯ ಸರ್ಕಾರವು ಆಲೂಗಡ್ಡೆ ಮಾರುಕಟ್ಟೆಯಲ್ಲೂ ಮಧ್ಯ ಪ್ರವೇಶಿಸಿದೆ. ಪ್ರತಿ ಕ್ವಿಂಟಾಲ್‌ಗೆ 360 ರೂ. ದರದಲ್ಲಿ ಆಲೂಗೆಡ್ಡೆಯನ್ನು ಸಂಗ್ರಹಿಸಿದೆ. ಒಟ್ಟು 1, 12, 370 ಕ್ವಿಂಟಾಲ್ ಆಲೂಗಡ್ಡೆಯನ್ನು ಖರೀದಿಸಲಾಗಿದೆ. ಕೃಷಿ ಮಾರುಕಟ್ಟೆಯಲ್ಲಿ ಅದರಲ್ಲೂ ಹಣ್ಣು ಹೂವು ತರಕಾರಿಗಳಂತಹ ಬೇಗನೆ ನಶಿಸುವ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸುವುದಕ್ಕೆ ನಿರಂತರವಾಗಿ ಅವಶ್ಯಕ ಹಣಕಾಸು ಒದಗಿಸಬೇಕಾದ ಅಗತ್ಯವನ್ನು ಮನಗಂಡು ಸರ್ಕಾರವು 75 ಕೋಟಿ ರೂಪಾಯಿಗಳ ಆವರ್ತಕ ನಿಧಿಯನ್ನು ಸ್ಥಾಪಿಸಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಈ ನಿಧಿಗೆ 50 ಕೋಟಿ ರೂಪಾಯಿಗಳನ್ನು ನೀಡುತ್ತವೆ ಮತ್ತು ರಾಜ್ಯ ಸರ್ಕಾರವು 25 ಕೋಟಿ ರೂಪಾಯಿಗಳನ್ನು ನೀಡುತ್ತದೆ. ಇದರಿಂದ ಹಣದ ಕೊರತೆಯ ಕಾರಣದಿಂದಾಗಿ, ರೈತರ ಪರವಾಗಿ ಮಾರುಕಟ್ಟೆಯಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸದೇ ಇರುವ ಸಂದರ್ಭ ತಪ್ಪುತ್ತದೆ.

6. ಭಾರತದಲ್ಲಿ , ಕೃಷಿ ವಲಯವು ಇಂದು ಬಿಕ್ಕಟ್ಟಿಗೆ ಸಿಲುಕಿದೆ. ಆಮದು- ರಪ್ತು ನೀತಿಯಿಂದಾಗಿ, ಅನೇಕ ಸರಕುಗಳು ಕಡಿಮೆ ಬೆಲೆಗೆ ವಿದೇಶದಿಂದ ನಮ್ಮ ದೇಶಕ್ಕೆ ಡಂಪ್ ಆಗುತ್ತಿದ್ದು ನಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕುತ್ತಿಲ್ಲವೆಂದು ತೋರುತ್ತಿದೆ. ನಮ್ಮ ರೈತರಿಗೆ ಸಾಕಷ್ಟು ಸಂರಕ್ಷಣೆ ಒದಗಿಸಲು ಆಮದು ಸುಂಕವನ್ನು ಸಕಾಲದಲ್ಲಿ ಸರಿತೂಗಿಸುವಲ್ಲಿ ವಿಫಲವಾದದ್ದು ಈ ಬಿಕ್ಕಟ್ಟಿಗತ ಕಾರಣವಾಗಿದೆ. 2001ರ ಏಪ್ರಿಲ್‌ನಿಂದ ಆಮದು- ರಪ್ತು ಪ್ರಮಾಣದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಿರುವುದರಿಂದ ಮತ್ತು ವಿಶ್ವ ವ್ಯಾಪಾರ ಸಂಸ್ಥೆಯ ಹೊಸ ವ್ಯವಸ್ಥೆಯಿಂದಾಗಿ ನಮ್ಮ ರೈತರು ಹಾಗೂ ಉತ್ಪಾದಕರು ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ವಿಶ್ವ ವ್ಯಾಪಾರ ಸಂಸ್ಥೆಯ ನೀರೀಕ್ಷಿಸಿ

ನನ್ನ ಸರ್ಕಾರವು 2000ದ ಆಗಸ್ಟ್‌ನಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ವಿಭಾಗವನ್ನು ಸ್ಥಾಪಿಸಿತು. ವಿಶೇಷವೆಂದರೆ, ಭಾರತದಲ್ಲಿ ಇಂಥ ಒಂದು ವಿಭಾಗವನ್ನು ಸ್ಥಾಪಿಸಿದ ಮೊದಲ ರಾಜ್ಯ ಕರ್ನಾಟಕ ಎಂಬುದನ್ನು ನಾನಿಲ್ಲಿ ಹೇಳಲೇಬೇಕು. ಈ ವಿಭಾಗವು ವಿಶ್ವ ವ್ಯಾಪಾರ ಸಂಸ್ಥೆಯ ಬಗ್ಗೆ ಮತ್ತು ಕೃಷಿ ಹಾಗೂ ಆಹಾರಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಈಗಾಗಲೇ ತನ್ನ ವರದಿಯನ್ನು ಸಲ್ಲಿಸಿದೆ. ಆ ವರದಿ ಮೇಲೆ ಹಲವಾರು ವೇದಿಕೆಗಳಲ್ಲಿ ಚರ್ಚೆ ಆಗಿದೆ. ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಮೇಲೆ ಕೆಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದೆ. ಅವುಯಾವುವೆಂದರೆ:-

- ನಮ್ಮ ರೈತರಿಗೆ ಸಮಾನ ಸ್ಪರ್ಧಾವಕಾಶ ದೊರಕುವಂತೆ ಸ್ಥಳೀಯ ಮಾರುಕಟ್ಟೆಗಳನ್ನು ಸ್ಪರ್ಧಾತ್ಮಕಗೊಳಿಸಲು ಕೃಷಿ ಸರಕುಗಳ ಮೇಲೆ ಆಮದು ಸುಂಕವನ್ನು ಒಂದು ಸೂಕ್ತ ಹಂತಕ್ಕೆ ಹೆಚ್ಚಿಸಬೇಕು.

- ಕೃಷಿ ಸರಕುಗಳ ಅಂತರಾಷ್ಟ್ರೀಯ ಬೆಲೆಗಳಲ್ಲಿ ಆಗುವ ಬದಲಾವಣೆಗೆ ತಕ್ಕಂತೆ ಸಕಾಲದಲ್ಲಿ ಆಮದು ಸುಂಕಗಳನ್ನು ಪರಿಷ್ಕರಿಸುವ ಒಂದು ಸ್ವಯಂಚಾಲಿತ ನಿಷ್ಕರ್ಷೆ ವ್ಯವಸ್ಥೆಯನ್ನು ಜಾರಿಗೆ ತರಬೇಕು.

- ವಿಶ್ವ ವ್ಯಾಪಾರ ಸಂಸ್ಥೆಯ ನೀತಿ ರಚನೆ ಕಾಲದಲ್ಲಿ ರಾಜ್ಯ ಸರ್ಕಾರಗಳ ಜೊತೆ ಹೆಚ್ಚು ಸಕ್ರಿಯವಾಗಿ ಸಮಾಲೋಚನೆ ನಡೆಸಬೇಕು ಇಲ್ಲವೇ ಅಂತರರಾಷ್ಟ್ರೀಯ ವ್ಯಾಪಾರವನ್ನು ಸಮವರ್ತಿ ಪಟ್ಟಿಗೆ ಸೇರಿಸಬೇಕು.

- ರಾಜ್ಯಗಳ ಜೊತೆ ಸೂಕ್ತ ಸಮಾಲೋಚನೆ ಮಾಡಿ ಸಾಕಷ್ಟು ಸಬ್ಸಿಡಿ ನೀಡುವ ವ್ಯವಸ್ಥೆಯನ್ನು ಅಂತಿಮಗೊಳಿಸಬೇಕು.

- ರೈತರಿಗೆ ಗಣನೀಯ ಪ್ರಮಾಣದಲ್ಲಿ ಇಳಿಸಿದ ಬಡ್ಡಿ ದರದಲ್ಲಿ ಸಕಾಲದಲ್ಲಿ ಸಾಕಷ್ಟು ಸಾಲ ದೊರಕಬೇಕು. ನಬಾರ್ಡ್ ಪ್ರಾಥಮಿಕ ಕೃಷಿ ಸಾಲದ ಸಂಘಗಳಿಗೆ ನೇರವಾಗಿ ಸಾಲ ನೀಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

7. ನನ್ನ ಸರ್ಕಾರವು ರಾಷ್ಟ್ರದ ಕೃಷಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಕುರಿತು ಒಂದು ಶ್ವೇತಪತ್ರವನ್ನು ಬಿಡುಗಡೆ ಮಾಡಬೇಕೆಂದು ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಒಂದು ಸಭೆಯನ್ನು ಕರೆಯಬೇಕೆಂದು ಭಾರತ ಸರ್ಕಾರವನ್ನು ಆಗ್ರಹಪಡಿಸುತ್ತದೆ. ಇದರಿಂದ ರಾಜ್ಯಗಳ ಮುಖ್ಯ ಮುಂತ್ರಿಗಳು ಈ ಬಹುಮುಖ್ಯ ವಿಷಯವನ್ನು ಕುರಿತು ರಾಷ್ಟ್ರೀಯ ವೇದಿಕೆಯಲ್ಲಿ ಚರ್ಚೆ ನಡೆಸಲು ಸಾಧ್ಯವಾಗುತ್ತದೆ ಮತ್ತು ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಹತ್ವವನ್ನು ನೀಡಿ, ಒಂದು ವ್ಯಾಪಕ ಕೃಷಿ ನೀತಿಯನ್ನು ರೂಪಿಸುವುದಕ್ಕೆ ಸಹಾಯವಾಗುತ್ತದೆ. ಇನ್ನು ನಾಲ್ಕು ವಾರಗಳಲ್ಲಿ ನನ್ನ ಸರ್ಕಾರವು ಎರಡನೇ ಆಯವ್ಯಯವನ್ನು ಮಂಡಿಸಲಿದೆ. ಈ ಆಯವ್ಯಯವು ನಮ್ಮ ರಾಜ್ಯದ ರೈತರ ಮತ್ತು ಅವರ ಕುಟುಂಬಗಳ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿಗೆ ಹೊಸ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ.

8. ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಗ್ರಾಮ ಮಟ್ಟದಲ್ಲಿ ಉದ್ಯೋಗಾವಕಾಶ ಒದಗಿಸುವ ಏಕೈಕ ದೊಡ್ಡ ಮೂಲ ಎಂಬುದನ್ನು ನಾವು ಮರೆಯಬಾರದು. ರಾಜ್ಯವು 2000-2001ನೇ ಸಾಲಿನಲ್ಲಿ 100.08 ಲಕ್ಷ ಟನ್ ಆಹಾರ ಧಾನ್ಯಗಳನ್ನು, 1762 ಲಕ್ಷ ಟನ್ ಎಣ್ಣೆ ಬೀಜಗಳನ್ನು 10.03 ಲಕ್ಷ ಬೇಲ್ ಹತ್ತಿಯನ್ನು 315 ಲಕ್ಷ ಟನ್ ತಂಬಾಕನ್ನು ಉತ್ಪಾದಿಸುವ ಗುರಿ ಇಟ್ಟುಕೊಂಡಿತ್ತು.

9. ಹೊಸ ಸವಾಲುಗಳನ್ನು ಎದುರಿಸಲು ನಮ್ಮ ರೈತರಿಗೆ ಅನುವು ಮಾಡುವ ಸಲುವಾಗಿ ಕೃಷಿ ವಿಸ್ತರಣಾ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರಬೇಕಾದ ಅಗತ್ಯವಿದೆ. ರೈತ ಸಮುದಾಯದ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ''ರೈತ ಮಿತ್ರ ಕೇಂದ್ರ'' ಅಂದರೆ ರೈತ ಸಂಪರ್ಕ ಕೇಂದ್ರಗಳನ್ನು ರಾಜ್ಯದ 745 ಹೋಬಳಿಗಳಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ. ಇಲ್ಲಿ ವ್ಯವಸಾಯೋತ್ಪನ್ನ ಬೆಲೆಗಳನ್ನು ಕುರಿತ ಮಾಹಿತಿಗಳನ್ನು ಒದಗಿಸಲಾಗುವುದು. ಈಗಾಗಲೇ ಅಂಥ 700 ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

10. ರಾಜ್ಯವು ಜಲಾನಯನ ಪ್ರದೇಶ ಅಭಿವೃದ್ಧಿಯ ರೂಪುರೇಷೆ ರಚನೆಯಲ್ಲಿ ಮುಂಚೂಣಿಯಲ್ಲಿದೆ. ವಿವಿಧ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳ ರಚನೆ, ಯೋಜನೆ ಮತ್ತು ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಸಮನ್ವಯಗೊಳಿಸುವುದಕ್ಕಾಗಿ ಒಂದು ಪ್ರತ್ಯೇಕ ಜಲಾನಯನ ಪ್ರದೇಶ ಅಭಿವೃದ್ಧಿ ನಿರ್ದೇಶನಾಲಯವನ್ನು ಸೃಜಿಸಲಾಗಿದೆ. ರಾಜ್ಯದ 10 ಜಿಲ್ಲೆಗಳಲ್ಲಿ ಜಲಾಯನ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಆರ್ಥಿಕ ನೆರವು ಪಡೆಯಲು ನಬಾರ್ಡ್ ಜೊತೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ.

11. ಇಂದು ತೋಟಗಾರಿಕೆಯನ್ನು, ರೈತ ಸಮುದಾಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಒತ್ತು ಕೊಡಬೇಕಾದ ಪ್ರಮುಖ ಕ್ಷೇತ್ರವೆಂದು ಪರಿಗಣಿಸಲಾಗುತ್ತಿದೆ. ಜಮೀನಿನ ವೈವಿಧ್ಯಮಯ ಬಳಕೆ ಪದ್ಧತಿಯಿಂದಾಗಿ ಸಾಂಪ್ರದಾಯಿಕ ಕೃಷಿಯಿಂದ ತೋಟಗಾರಿಕೆಯತ್ತ ಒಲವು ಹೆಚ್ಚಾಗುತ್ತಿದೆ. ಕಾರ್ಪೊರೇಟ್ ವಲಯವೂ ಕೂಡ ತೋಟಗಾರಿಕೆಯಲ್ಲಿ ತೊಡಗಿದೆ. ಲಭ್ಯವಿರುವ ಸಾಮರ್ಥ್ಯಗಳನ್ನು ದೃಷ್ಟಿಯಲಿಟ್ಟುಕೊಂಡು, ಸರ್ಕಾರವು ತೋಟಗಾರಿಕೆ ಬೆಳೆಗಳ ಪ್ರದೇಶ, ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮಹತ್ವಾಕಾಂಕ್ಷೆ ಯೋಜನೆಯನ್ನು ಇಟ್ಟುಕೊಂಡಿದೆ. ರಫ್ತು ಗುಣಮಟ್ಟದ, ಹೆಚ್ಚಿನ ಬೆಲೆತರುವ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಹನಿ ನೀರಾವರಿ, ಜೈವಿಕ ತಂತ್ರಜ್ಞಾನ, ಸಾವಯವ ಕೃಷಿ, ಕಡಿಮೆ ಖರ್ಚಿನಲ್ಲಿ ಪುಷ್ಪ ಕೃಷಿಯಂಥ ಆಧುನಿಕ ತಂತ್ರಜ್ಞಾನಗಳನ್ನು ಅಸವಡಿಸಿಕೊಂಡು ಹಾಗೂ ಆಯ್ದ ರೈತರಿಗೆ ಪರಿಣಾಮಕಾರಿಯಾದ ಕ್ಷೇತ್ರ ತರಬೇತಿಯನ್ನು ನೀಡಿ ಉತ್ಪನ್ನದ ಗುಣಮಟ್ಟವನ್ನು ಸುಧಾರಿಸಲು ಉದ್ದೇಶಿಸಲಾಗಿದೆ.

12. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯು ಒಟ್ಟು 150 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನಲ್ಲಿ ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆಗಳನ್ನು ಸ್ಥಾಪಿಸುತ್ತಿದೆ. ಅಗತ್ಯ ಮಾರುಕಟ್ಟೆ ಮೂಲ ಸೌಕರ್ಯಗಳನ್ನು ಸೃಜಿಸಲು ರಾಜ್ಯ ಸರ್ಕಾರವು, ಈ ಯೋಜನೆಗೆ ತನ್ನ ನೆರವಿನ ರೂಪದಲ್ಲಿ ಕನ್ನಮಂಗಲ ತೋಟಗಾರಿಕೆ ಫಾರಂನ ಬಳಿ 60 ಎಕರೆಗಳಷ್ಟು ಜಮೀನನ್ನು ನೀಡಿದೆ. ಈ

ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಬಹಳಷ್ಟು ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಮ್ಮ ತೋಟಗಾರಿಕೆ ಉತ್ಪನ್ನಗಳನ್ನು ಸಕಾಲದಲ್ಲಿ ವಿಲೆ ಮಾಡಲು ಅನುಕೂಲವಾಗುತ್ತದೆಯಲ್ಲದೆ ಕಟಾವು ನಂತರ ಆಗುವ ನಷ್ಟವೂ ಕಡಿಮೆಯಾಗುತ್ತದೆ.

13. ರಾಜ್ಯ ಸರ್ಕಾರವು ತೋಟಗಾರಿಕೆ ವಲಯದಲ್ಲಿ ಜೈವಿಕ ತಂತ್ರಜ್ಞಾನದ ಬಳಕೆಗೆ ಇರುವ ಅವಕಾಶಗಳನ್ನು ಮನಗಂಡು, ಬೆಂಗಳೂರಿನ ಸಮೀಪದ ಹುಳಿಮಾವು ಗ್ರಾಮದಲ್ಲಿ ಒಂದು ವಿಶಿಷ್ಟ ಹಾಗೂ ವಿನೂತನವಾದ ಅಂಗಾಂಶ ಕೃಷಿ ಪ್ರಯೋಗಾಲಯವನ್ನು ಸ್ಥಾಪಿಸುತ್ತಿದೆ. ಈ ಪ್ರಯೋಗಾಲಯದ ಮೂಲಕ ಅತ್ಯುತ್ತಮ ಗುಣಮಟ್ಟದ 201 ಲಕ್ಷ ಸಸಿಗಳನ್ನು ಪೂರೈಸಲು ಉದ್ದೇಶಿಸಿದೆ.

14. ಸರ್ಕಾರದ ಯಾವುದೇ ಪಾಲಿಲ್ಲದೆ ಸದಸ್ಯರ ಸ್ವಸಹಾಯ ಮತ್ತು ಅವರ ಸಂಪೂರ್ಣ ಒಡೆತನದ ಆಧಾರದ ಮೇಲೆ ಸಹಕಾರ ಸಂಘಗಳನ್ನು ಸ್ವಇಚ್ಛೆಯಿಂದ ರಚಿಸಿಕೊಳ್ಳಲು ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸೌಹಾರ್ದ ಸಹಕಾರಿ ಅಧಿನಿಯಮವನ್ನು ತರಲಾಗಿದೆ. ಈ ಅಧಿನಿಯಮವು ಸರ್ಕಾರದ ನಿಯಂತ್ರಣವನ್ನು ಕಡಿಮೆ ಮಾಡುತ್ತದೆ ಮತ್ತು ಸಹಕಾರ ಸಂಘಗಳು ಸ್ವಾವಲಂಬಿಗಳಾಗಿ, ಸಹಕಾರ ತತ್ವಗಳ ಮಾರ್ಗದರ್ಶನದಲ್ಲಿ ನಡೆಯುವ ಆರ್ಥಿಕ ಉದ್ಯಮಗಳಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸುತ್ತದೆ.

15. 2000-2001ರಲ್ಲಿ ಎಲ್ಲಾ ರೀತಿಯ ಸಹಕಾರ ಸಂಘಗಳಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವಂತೆ ಮತ್ತು ಆ ಮೂಲಕ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವಂತೆ ಮಾಡಲು ಎರಡು ಹೊಸ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಪ್ರಕಾರ 2000ನೇ ಇಸವಿ ನವೆಂಬರ್ ಅಂತ್ಯದ ವೇಳೆಗೆ 1,30,000 ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದ್ದು 30,000 ಲಕ್ಷ ರೂಪಾಯಿ ಸಾಲವನ್ನು ಮಂಜೂರು ಮಾಡಲಾಗಿದೆ.

16. ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಉತ್ತೇಜನ ನೀಡುತ್ತಿರುವಂಥ ರಾಜ್ಯಗಳ ಪೈಕಿ ಕರ್ನಾಟಕವು ಯಾವಾಗಲೂ ಮುಂಚೂಣಿಯಲ್ಲಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. 2000ದ ಸಾಲಿನಲ್ಲಿ ರಾಜ್ಯವು ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ಶಾಂತಿಯುತವಾಗಿ ಚುನಾವಣೆಗಳನ್ನು ನಡೆಸಿರುವುದು ಮತ್ತು ರಾಜ್ಯದಲ್ಲಿ ಚೈತನ್ಯಪೂರ್ಣ ಪಂಚಾಯತ್ ರಾಜ್ ಸಂಸ್ಥೆಗಳ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ನನಗೆ ಸಂತಸ ತಂದಿದೆ. ನನ್ನ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಆರ್ಥಿಕವಾಗಿ ಮತ್ತು ಆಡಳಿತಾತ್ಮಕವಾಗಿ ಮತ್ತಷ್ಟು ಬಲಪಡಿಸುವ ವಿಷಯವನ್ನು ಪರಿಗಣಿಸುತ್ತದೆ. ಈ ಸಂಬಂಧದಲ್ಲಿ, ಈ ವಿಷಯಗಳ ಬಗ್ಗೆ ಪರಿಶೀಲಿಸಲು ಇತ್ತೀಚೆಗೆ ನೇಮಕ ಮಾಡಿದ ರಾಜ್ಯ ಹಣಕಾಸು ಆಯೋಗದ ವರದಿಯನ್ನು ನಿರೀಕ್ಷಿಸುತ್ತಿದೆ.

17. ಪಂಚಾಯತ್ ರಾಜ್ ಸಂಸ್ಥೆಗಳ ಹೆಚ್ಚು ಜವಾಬ್ದಾರಿಯಾಗಿರಲು ಮತ್ತು ಸ್ಪಂದಿಸುವಂತೆ ಮಾಡಲು ನನ್ನ ಸರ್ಕಾರವು ಪಂಚಾಯತ್ ಜಮಾಬಂದಿ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಇದು ಒಂದು ವಿನೂತನ ಕ್ರಮವಾಗಿದೆ. ಈ ವ್ಯವಸ್ಥೆಯಿಂದ, ತರಬೇತಿ ಪಡೆದ ಪಂಚಾಯಿತಿ ನೌಕರರ

ತಂಡಗಳು ನಿರ್ದಿಷ್ಟ ವೇಳಾ ಪಟ್ಟಿಗೆ ಅನುಸಾರವಾಗಿ ಗ್ರಾಮ ಪಂಚಾಯಿತಿಗಳ ಎಲ್ಲಾ ಲೆಕ್ಕಪತ್ರಗಳನ್ನು ಮತ್ತು ಕಾಮಗಾರಿಗಳನ್ನು ವಾರ್ಷಿಕ ತಪಾಸಣೆ ಮಾಡಲು ಸಾಧ್ಯವಾಗುತ್ತದೆ. ಮುಂಚಿತವಾಗಿ ತಿಳಿಸಿ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರ ಮತ್ತು ಸಾರ್ವಜನಿಕರ ಸಮ್ಮುಖದಲ್ಲಿ ಈ ತಪಾಸಣೆ ಮಾಡಲಾಗುತ್ತದೆ. ಪಂಚಾಯಿತಿ ಜಮಾಬಂದಿಯ ಮೊದಲ ಸುತ್ತು ಎಲ್ಲಾ ಜಿಲ್ಲೆಗಳಲ್ಲೂ ಸಂಪೂರ್ಣವಾಗಿದ್ದು, ಈ ಪ್ರಯೋಗವು, ಗ್ರಾಮ ಪಂಚಾಯಿತಿಗಳ ಕಾರ್ಯಗಳು ಹೆಚ್ಚು ಪಾರದರ್ಶಕ ಮತ್ತು ಸ್ಪಂದನಶೀಲವಾಗಿರುವಂತೆ ಮಾಡುವಲ್ಲಿ ಸಫಲವಾಗಿದೆಯೆಂದು ಪ್ರಾಥಮಿಕ ವರದಿಗಳಿಂದ ತಿಳಿದು ಬರುತ್ತಿದೆ ಎಂಬ ಸಂಗತಿಯನ್ನು ಈ ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತಿದೆ.

18. ನನ್ನ ಸರ್ಕಾರವು ಇತ್ತೀಚೆಗೆ ಪ್ರಾರಂಭಿಸಿದ ಸ್ವಚ್ಛಗ್ರಾಮ ಕಾರ್ಯಕ್ರಮದಲ್ಲಿ ಸುಮಾರು 1000 ಗ್ರಾಮಗಳಿಗೆ ಒಳ್ಳೆ ರಸ್ತೆ ಒದಗಿಸುವುದು ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಚರಂಡಿಗಳು, ಸ್ವಚ್ಛ ಶೌಚಾಲಯಗಳು, ಸಮುದಾಯಕ್ಕೆ ಗೊಬ್ಬರದ ಅಂಗಳಗಳು ಮತ್ತು ಪ್ರತಿಯೊಂದು ಕುಟುಂಬಕ್ಕೂ ಹೊಗೆರಹಿತ ಒಲೆಗಳನ್ನು ಒದಗಿಸುವುದೂ ಸೇರಿದಂತೆ ಸಮಗ್ರ ಗ್ರಾಮ ನೈರ್ಮಲ್ಯ ಕಾರ್ಯವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಪ್ರಸ್ತುತ ವರ್ಷದಲ್ಲಿ 200ಕೋಟಿ ರೂಪಾಯಿ ವೆಚ್ಚದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕರ್ನಾಟಕದ ಈ ಸ್ವಚ್ಛ ಗ್ರಾಮ ಕಾರ್ಯಕ್ರಮವು ಇಡೀ ದೇಶದಲ್ಲೇ ಕೈಗೊಂಡಿರುವ ಅತ್ಯಂತ ದೊಡ್ಡ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮವೆಂಬುದು ಮಾನ್ಯ ಸದಸ್ಯರಿಗೆ ಸಂತೋಷ ಉಂಟು ಮಾಡುವಂತಹ ಸಂಗತಿಯಾಗಿದೆ. ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮದ ನಿಟ್ಟಿನಲ್ಲಿ ರಾಜ್ಯದ ಈ ಪ್ರಯತ್ನ ಈವರೆಗೂ ಅಲಕ್ಷಿತವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ವ್ಯವಸ್ಥೆ ಒದಗಿಸುವ ವಿಷಯದ ಕಡೆಗೆ ದೇಶವು ಗಮನ ಹರಿಸುವಂತೆ ಮಾಡಬಲ್ಲ ಮಹತ್ತರ ನಿದರ್ಶನವಾಗುತ್ತದೆ ಎಂದು ನಾನು ನಂಬುತ್ತೇನೆ.

19. ನನ್ನ ಸರ್ಕಾರವು 80 ಕೋಟಿ ರೂಪಾಯಿ ವೆಚ್ಚದಲ್ಲಿ ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಸುಮಾರು 200 ಗ್ರಾಮಗಳಲ್ಲಿ ನೆದರ್‌ಲ್ಯಾಂಡ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಅನುಷ್ಠಾನ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. ನೆರವು ನೀಡಿದ ದೇಶವು ನೇಮಿಸಿದ್ದ ತಜ್ಞರು ಈ ಕಾರ್ಯಕ್ರಮದ ಅನುಷ್ಠಾನದ ಗುಣಮಟ್ಟವನ್ನು ಮೆಚ್ಚಿದ್ದಾರೆ. ತೊಂದರೆಗೊಳಗಾಗಿದ್ದ ಜಿಲ್ಲೆಗಳ ಗ್ರಾಮಸ್ಥರು ಕೊನೆಗೂ ತಮ್ಮ ಮನೆ ಬಾಗಿಲಿಗೆ ಸುರಕ್ಷಿತಗೆ ಕುಡಿಯುವ ನೀರು ದೊರಕುವಂತಹ ಸೌಲಭ್ಯವನ್ನು ಪಡೆದಿರುತ್ತಾರೆ.

20. ಗ್ರಾಮೀಣ ರಸ್ತೆಗಳು, ಗ್ರಾಮಾಂತರ ಮೂಲ ಸೌಕರ್ಯಗಳ ಒಂದು ಮುಖ್ಯ ಅಂಗ. ಇವು ನಮ್ಮ ಗ್ರಾಮಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಹೊಸದಾಗಿ ಸ್ಥಾಪಿಸಿರುವ ಗ್ರಾಮೀಣ ಅಭಿವೃದ್ಧಿ ಇಂಜನೀಯರಿಂಗ್ ವಿಭಾಗವು 1999-2000ದ ಸಾಲಿಗೆ ರೂಪಿಸಿರುವ ಒಂದು ವಿಶೇಷ ಕ್ರಿಯಾ ಯೋಜನೆಯ ಪ್ರಕಾರ ರಾಜ್ಯಾದ್ಯಂತ ಗ್ರಾಮೀಣ ರಸ್ತೆಗಳ ಸುಧಾರಣಾ ಕಾರ್ಯವನ್ನು ಕೈಗೊಂಡಿದೆ. ಈ ಯೋಜನೆಯ ಅಡಿಯಲ್ಲಿ 138 ಕೋಟಿ ರೂಪಾಯಿ ವೆಚ್ಚದಲ್ಲಿ 2500ಕ್ಕೂ ಹೆಚ್ಚು ರಸ್ತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ ಮತ್ತು 3340 ಕಿಲೋಮೀಟರಗಳಷ್ಟು ಉದ್ದದ ಗ್ರಾಮೀಣ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ.

21. ಕರ್ನಾಟಕ ರಾಜ್ಯವು ವಿಶ್ವದಲ್ಲಿಯೇ ವಿಶಿಷ್ಟ ಜೀವಿ ಪರಿಸರ ವ್ಯವಸ್ಥೆಯೆಂದು ಪರಿಗಣಿತವಾಗಿರುವ ಅತ್ಯಂತ ಅಮೂಲ್ಯವಾದ ಮತ್ತು ಭವ್ಯ ಅರಣ್ಯ ಸಂಪತ್ತನ್ನು ಹೊಂದಿದೆ. ಪಶ್ಚಿಮ ಘಟ್ಟಗಳ ಯೋಜನೆಗಳ ಅಡಿಯಲ್ಲಿ ಜೀವಿ ವೈವಿಧ್ಯತೆಯಿಂದ ಸಮೃದ್ಧವಾದ ಪ್ರದೇಶಗಳನ್ನು ಸಮೀಕ್ಷೆ ಮಾಡಲಾಗಿದೆ ಮತ್ತು ಜೀವಿ ವೈವಿಧ್ಯ ನಿರ್ವಹಣೆ ಕ್ಷೇತ್ರಗಳನ್ನು ಸ್ಥಾಪಿಸುವ ಮೂಲಕ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

22. ಬೀಳುಬಿದ್ದ ಅರಣ್ಯ ಜಮೀನುಗಳು, ಊರೊಟ್ಟಿನ ಜಮೀನುಗಳು ಮತ್ತು ಇತರ ಸಮುದಾಯ ಜಮೀನಿನಲ್ಲಿ ಮತ್ತೆ ವನ ನಿರ್ಮಾಣ ಮಾಡಲು, ರಾಜ್ಯದಲ್ಲಿ ಹಮ್ಮಿಕೊಂಡಿರುವ, ಬಂಜರು ಭೂಮಿಗಳಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮವು ಅರಣ್ಯ ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳಲ್ಲಿ ಒಂದು. ಕಳೆದ ಸಾಲಿನಲ್ಲಿ 3.66 ಲಕ್ಷ ಹೆಕ್ಟೇರುಗಳಷ್ಟು ಬೀಳುಬಿದ್ದ ಮತ್ತು ಬಂಜರು ಜಮೀನುಗಳಲ್ಲಿ ಕಾಡು ಬೆಳೆಸಲಾಗಿದೆ. ಅರಣ್ಯ ಇಲಾಖೆಯ ಮತ್ತೊಂದು ಮುಖ್ಯ ಕಾರ್ಯಕ್ರಮವೆಂದರೆ ಕ್ಷೇತ್ರ ಅರಣ್ಯೀಕರಣ. ಈ ಕಾರ್ಯಕ್ರಮದ ಅಡಿಯಲ್ಲಿ 2000-2001ರ ಅವಧಿಯಲ್ಲಿ ರಾಜ್ಯದಲ್ಲಿ ಕ್ಷೇತ್ರ ಅರಣ್ಯೀಕರಣ ಅಭಿವೃದ್ಧಿಗಾಗಿ ಅರಣ್ಯ ಇಲಾಖೆಯ 61 ದಶಲಕ್ಷ ಸಸಿಗಳನ್ನು ಪೂರೈಸಿದೆ ಮತ್ತು 2001-2002ನೇ ಸಾಲಿಗೆ 60 ದಶಲಕ್ಷ ಸಸಿಗಳನ್ನು ಸರಬರಾಜು ಮಾಡಲು ಉದ್ದೇಶಿಸಿದೆ.

23. ಕರ್ನಾಟಕ ಸರ್ಕಾರವು ಶಿಕ್ಷಣಕ್ಕೆ ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಮತ್ತು ಎಲ್ಲ ಮಟ್ಟದಲ್ಲಿಯೂ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಅತಿ ಹೆಚ್ಚು ಆದ್ಯತೆಯನ್ನು ನೀಡಿದೆ.

24. ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯವು ಸಹಭಾಗಿ ಆಗುವುದಕ್ಕೆ ಉತ್ತೇಜನ ನೀಡುವ ಮತ್ತು ಸರ್ಕಾರಿ ಶಾಲೆಗಳಲ್ಲಿ ಭೌತಿಕ ಮೂಲ ಸೌಕರ್ಯಗಳ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ದತ್ತು ಯೋಜನೆ ಎಂಬ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಈ ಯೋಜನೆಗೆ ಕಂಪನಿಗಳು, ಸಾರ್ವಜನಿಕರು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಈ ಯೋಜನೆಯಡಿ ಈಗಾಗಲೇ 430 ಶಾಲೆಗಳನ್ನು ದತ್ತು ತೆಗೆದುಕೊಳ್ಳಲಾಗಿದೆ.

25. ಶಾಲೆಗಳನ್ನು ಸಮುದಾಯಕ್ಕೆ ಬಹಳ ಹತ್ತಿರ ತರುವ ನಿಟ್ಟಿನಲ್ಲಿ ಶಾಲೆಗಳು ನಮ್ಮವು ಮತ್ತು ಶಾಲೆಗಳ ಪ್ರಗತಿ ನಮ್ಮ ಹೊಣೆ ಎಂಬ ಭಾವನೆಯನ್ನು ಸಮುದಾಯದಲ್ಲಿ ಮೂಡಿಸುವ ಸಲುವಾಗಿ ಸರ್ಕಾರವು ಸಮುದಾಯದತ್ತ ಶಾಲೆ ಎಂಬ ಕಾರ್ಯಕ್ರಮವನ್ನು ಆರಂಭಿಸಿದೆ. ಶಾಲೆಯ ಒಡೆತನವನ್ನು ಸಮುದಾಯವೇ ವಹಿಸಿಕೊಳ್ಳುವಂತೆ ಮಾಡುವ ಮತ್ತು ಶಾಲೆಯ ಸಮುದಾಯಕ್ಕೆ ಜವಾಬ್ದಾರಿಯಾಗಿರುವಂತೆ ಮಾಡುವ ಸಲುವಾಗಿ ನನ್ನ ಸರ್ಕಾರ ಶಿಕ್ಷಣ ಅಧಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಯನ್ನು ರಚಿಸಲು ಉದ್ದೇಶಿಸಿದೆ. ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ದೊರಕುವಂತೆ ಮಾಡುವ ಕಾರ್ಯ ತ್ವರಿತಗೊಳ್ಳುವಂತೆ ಮಾಡಲು ಕಾರ್ಯ ಚಟುವಟಿಕೆಗಳ ಉಸ್ತುವಾರಿಗೆ ಗ್ರಾಮ ಪಂಚಾಯಿತಿ ಶಿಕ್ಷಣ ಸಮಿತಿಗಳನ್ನು ಮತ್ತು ತಾಲ್ಲೂಕು ಪಂಚಾಯಿತಿ ಶಿಕ್ಷಣ ಸಮಿತಿಗಳನ್ನು ಸಹಾ ರಚಿಸಲಾಗುವುದು.

26. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ರಾಜ್ಯದ ಆಯ್ದ 1000 ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ಆರಂಭಿಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ಭಾರಿ ಪ್ರಮಾಣದಲ್ಲಿ ಪರಿಣಾಮಕಾರಿಯಾದ ಚೈತನ್ಯ ಎಂಬ ಸೇವಾಕಾಲೀನ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದಡಿ ಮಾರ್ಚ್ 2001ರ ವೇಳೆಗೆ 50000 ಶಿಕ್ಷಕರಿಗೆ ತರಬೇತಿ ನೀಡಲಾಗುವುದು ಮತ್ತು ಜೂನ್ ಅಂತ್ಯದ ಒಳಗೆ ಇನ್ನೂ 50,000 ಶಿಕ್ಷಕರಿಗೆ ತರಬೇತಿ ನೀಡಲಾಗುವುದು.

27. ಈ ವರ್ಷ ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಕರಿಗೆ ಯು.ಜಿ.ಸಿ. ವೇತನ ಶ್ರೇಣಿಗಳನ್ನು ನೀಡುವ ಮೂಲಕ ಅವರ ಬಹುದಿನದ ಬೇಡಿಕೆಯನ್ನು ಈಡೇರಿಸಲಾಯಿತು. ಪ್ರವೇಶ, ಪರೀಕ್ಷಾ ಫಲಿತಾಂಶಗಳು ಮತ್ತು ಇತರ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಸಾರ ಮಾಡುವುದಕ್ಕಾಗಿ ಎಲ್ಲಾ ವಿಶ್ವವಿದ್ಯಾನಿಲಯಗಳು ವೆಬ್‌ಸೈಟ್‌ಗಳನ್ನು ರಚಿಸಿಕೊಂಡಿದೆ. ಮಾಹಿತಿ ತಂತ್ರಜ್ಞಾನ ಮತ್ತು ಆಡಳಿತ ನಿರ್ವಹಣಾ ಶಿಕ್ಷಣಕ್ಕೆ ಉತ್ತೇಜನ ನೀಡುವ ಸಲುವಾಗಿ 150 ಕಾಲೇಜುಗಳಲ್ಲಿ ಬಿಸಿಎ, ಎಂಸಿಎ ಮತ್ತು ಎಂಬಿಎ ಯಂಥ ಹೊಸ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ವಿಶ್ವವಿದ್ಯಾನಿಲಯಗಳ ಕಾರ್ಯಕಲಾಪಗಳನ್ನು ಸರಳಗೊಳಿಸುವ ಮತ್ತು ಉತ್ತಮಪಡಿಸುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯಗಳ ಅಧಿನಿಯಮಕ್ಕೆ ವ್ಯಾಪಕ ತಿದ್ದುಪಡಿಗಳನ್ನು ತರಲು ನಾವು ಉದ್ದೇಶಿಸಿದ್ದೇವೆ. ಈ ವಿಷಯವು ಈಗಾಗಲೇ ಜಂಟಿ ಸಲಹಾ ಸಮಿತಿ ಮುಂದಿದೆ. ಈ ವರ್ಷದೊಳಗೆ ಅದು ಅಂಗೀಕೃತವಾಗುವ ನಿರೀಕ್ಷೆ ನಮಗಿದೆ.

28. ನನ್ನ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸರ್ವತೋಮುಖ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಜೊತೆ ಜೊತೆಯಲ್ಲೇ ನೈಪುಣ್ಯತೆ ಅಭಿವೃದ್ಧಿ ಮತ್ತು ಸ್ವಯಂ ಉದ್ಯೋಗಕ್ಕೆ ಒತ್ತುನೀಡುವ ಯೋಜನೆಗಳ ಹಾಗೂ ಶಿಕ್ಷಣ ನೀರಾವರಿ ಮತ್ತು ವಸತಿ ಕ್ಷೇತ್ರಗಳಿಗೆ ಹೆಚ್ಚು ಒತ್ತನ್ನು ನೀಡುತ್ತದೆ. ಗಂಗಾ ಕಲ್ಯಾಣ ಯೋಜನೆಯನ್ನು ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. 1100ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಈ ವರ್ಷ ಕೊರೆಯಲಾಗಿದೆ.

29. ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟುವ ದೃಷ್ಟಿಯಿಂದ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಾಧ್ಯಮಿಕ ಶಾಲೆಯ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹಕ ವಿದ್ಯಾರ್ಥಿವೇತನ ನೀಡಲು ಒಂದು ಯೋಜನೆಯನ್ನು ಜಾರಿಗೆ ತರಲಾಗುವುದು. ಪರಿಶಿಷ್ಟ ಜಾತಿ / ಪರಶಿಷ್ಟ ಪಂಗಡದ ಮಕ್ಕಳಿಗೆ ಸಾಕಷ್ಟು ಸ್ಥಳಾವಕಾಶ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ನಿರ್ಮಿಸಲಾಗುವುದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ನಿರುದ್ಯೋಗಿಗಳಿಗೆ ಅವರಲ್ಲಿರುವ ಕೌಶಲ್ಯವನ್ನು ಇನ್ನಷ್ಟು ಹೆಚ್ಚಿಸುವ ಮೂಲಕ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ವ್ಯಾಪಕ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಮುಂದುವರಿಸಲಾಗುವುದು. ತೀರಾ ಹಿಂದುಳಿದ ಬುಡಕಟ್ಟು ಗುಂಪುಗಳ ಆರ್ಥಿಕ ಅಭಿವೃದ್ಧಿಗಾಗಿ ಮತ್ತು ಕಡಿಮೆ ಸಾಕ್ಷರತೆ ಇರುವ ಪ್ರದೇಶಗಳಲ್ಲಿನ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳಿಗಾಗಿ ಶಿಕ್ಷಣ ಸಂಕೀರ್ಣಗಳನ್ನು ಸ್ಥಾಪಿಸುವುದಕ್ಕಾಗಿ ವಿಶೇಷ ಯೋಜನೆಗಳನ್ನು ಸಹ ಕೈಗೊಳ್ಳಲಾಗುವುದು.

30. ನನ್ನ ಸರ್ಕಾರವು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಿಸುವ ಮತ್ತು ಅವರ ಅಭಿವೃದ್ಧಿಗಾಗಿ ಯೋಜನೆಗಳ ಅನುಷ್ಠಾನ ಮಾಡುವ ಕಾರ್ಯವನ್ನು ಸಹ ಮುಂದುವರಿಸುತ್ತದೆ. 20 ಮೆಟ್ರಿಕ್ ತರುವಾಯದ ಮತ್ತು 3 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲಾಗಿದೆ. ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳ ಬೋರ್ಡಿಂಗ್ ಚಾರ್ಜುಗಳನ್ನು ತಿಂಗಳಿಗೆ 350 ರೂಪಾಯಿಯಿಂದ 400 ರೂಪಾಯಿಗಳಿಗೆ ಮತ್ತು ಮೆಟ್ರಿಕ್ ತರುವಾಯದ ವಿದ್ಯಾರ್ಥಿಗಳ ಸಂದರ್ಭದಲ್ಲಿ ತಿಂಗಳಿಗೆ 400 ರೂಪಾಯಿಯಿಂದ 450 ರೂಪಾಯಿಗಳಿಗೆ ಏರಿಸಲಾಗಿದೆ. 8 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ 20 ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗಾಗಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 505 ಕೊಳವೆ ಬಾವಿಗಳನ್ನು ನಿರ್ಮಿಸಿ ಕಾರ್ಯಾರಂಭ ಮಾಡಿದ್ದು, ಇದರಿಂದ 2500 ಹೆಕ್ಟೇರಿಗೆ ನೀರಾವರಿ ಒದಗಿಸುವ ಸಾಮರ್ಥ್ಯ ಸೃಜಿಸಲಾಗಿದೆ.

31. ಮಹಿಳೆಯರನ್ನು ಗಣನೀಯ ಪ್ರಮಾಣದಲ್ಲಿ ಸಬಲರನ್ನಾಗಿಸುವ ಸಲುವಾಗಿ ಸ್ತ್ರೀಶಕ್ತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. 1 ಲಕ್ಷ ಸ್ವಸಹಾಯ ತಂಡಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈಗಾಗಲೇ 38,000 ತಂಡಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈಗಾಗಲೇ 38,000 ತಂಡಗಳನ್ನು ರಚಿಸಲಾಗಿದೆ. ಪ್ರತಿಯೊಂದು ಸ್ವಸಹಾಯ ತಂಡಕ್ಕೆ 5000 ರೂಪಾಯಿಗಳ ಅವರ್ತಕ ನಿಧಿಯನ್ನು ಮತ್ತು 5000 ರೂಪಾಯಿಗಳ ಮೌಲ್ಯದ ಕಿಟ್ಟನ್ನು ನೀಡಲಾಗುವುದು. ಆಶ್ರಯ ಯೋಜನೆಯಡಿಯಲ್ಲಿನ ಮನೆಗಳಿಗೆ ಮಹಿಳೆಯರನ್ನು ಏಕ ಮಾತ್ರ ಒಡತಿಯರನ್ನಾಗಿ ಮಾಡಲಾಗಿದೆ. ವಿದ್ಯಾರ್ಥಿನಿಯರಿಗೆ ಪಿ.ಯು.ಸಿ. ಮಟ್ಟದವರೆಗೆ ಬೋಧನ ಶುಲ್ಕವನ್ನು ಮನ್ನಾ ಮಾಡಲಾಗಿದೆ.

32. ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಮಾರ್ಚ್ 2000 ದಂದು ಪ್ರಾರಂಭಿಸಲಾಯಿತು. ಮಾಹಿತಿ ತಂತ್ರಜ್ಞಾನ ಸಾಮಾನ್ಯ ಪ್ರಜೆಗೆಕೂಡ ತಲಪುವಂತೆ ಮಾಡುವುದು ಇದರ ಉದ್ದೇಶ. ಯುವ ಡಾಟ್‌ಕಾಂನಲ್ಲಿ 7 ಪ್ರಾಯೋಗಿಕ ಕೇಂದ್ರಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾಹಿತಿ ತಂತ್ರಜ್ಞಾನದ ಸೀಟುಗಳನ್ನು 10,000 ದಿಂದ 14,000ಕ್ಕೆ ಹೆಚ್ಚಿಸಲಾಗಿದೆ. ಆಪ್ಟಿಕ್ ಫೈಬರ್ ಕೇಬಲ್ ಅಳವಡಿಸಲು ತ್ವರಿತ ಅನುಮೋದನೆ ನೀಡುವುದಕ್ಕಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಏಕ ಗವಾಕ್ಷಿ ಸಮಿತಿಯನ್ನು ರಚಿಸಲಾಗಿದೆ. ಕರ್ನಾಟಕ ಸರ್ಕಾರವು, ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಮಾತ್ರವಲ್ಲದೆ ಇತರ ಜ್ಞಾನ ಆಧಾರಿತ ಕ್ಷೇತ್ರಗಳಲ್ಲಿ ಸಹ ಕರ್ನಾಟಕ ತನ್ನ ಅಗ್ರ ಸ್ಥಾನವನ್ನು ಉಳಿಸಿಕೊಂಡು ಹೋಗುವಂತೆ ನೋಡಿಕೊಳ್ಳಲು ಬದ್ಧವಾಗಿದೆ.

33. ರಾಜ್ಯದಲ್ಲಿನ ಪ್ರತಿಯೊಬ್ಬ ರೈತನಿಗೂ ಗಣಕೀಕೃತ ಭೂ ದಾಖಲೆಗಳನ್ನು ಒದಗಿಸುವ ಕಾರ್ಯಕ್ರಮವು ಪ್ರಗತಿಯಲ್ಲಿದೆ. ಮುಂದಿನ ಒಂದು ವರ್ಷದೊಳಗೆ 20 ದಶಲಕ್ಷಕ್ಕೂ ಹೆಚ್ಚು ರೈತರು, ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ಸ್ಥಾಪಿಸಲಾಗುವ ಪಹಣಿ ಕಿಯೋಸ್ಕ್‌ಗಳಿಂದ ಗಣಕೀಕೃತ ಭೂ ದಾಖಲೆಗಳನ್ನು ಪಡೆಯುತ್ತಾರೆ. ಈ ಯೋಜನೆಯನ್ನು ಉಳಿದ ತಾಲ್ಲೂಕುಗಳಲ್ಲಿ ಈಗಾಗಲೇ

ಜಾರಿಗೊಳಿಸಲಗಿದ್ದು ಈ ಯೋಜನೆಗೆ ಜನರಿಂದ ಮೆಚ್ಚುಗೆ ದೊರೆತಿದೆ. 2001ನೇ ಮಾರ್ಚ್ ಗೆ ಅಂತ್ಯದೊಳಗೆ ಇನ್ನೂ 30 ತಾಲ್ಲೂಕುಗಳಲ್ಲಿ ಭೂದಾಖಲೆಗಳನ್ನು ಕಂಪ್ಯೂಟರೀಕರಣಗೊಳಿಸುವ ಯೋಜನೆಯನ್ನು ಜಾರಿಗತ ತರಲು ಯೋಜಿಸಲಾಗಿದೆ. ಈ ಕಾರ್ಯಕ್ರಮವು ಕಾರ್ಯಾರಂಭ ಮಾಡಿದ ಮೇಲೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುನ್ಮಾನ ಆಡಳಿತ ನನಸಾಗುವುದಲ್ಲದೆ ಭೂದಾಖಲೆಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ತರಲು ಸಾಧ್ಯವಾಗುತ್ತದೆ.

34. ರಾಜ್ಯ ಸರ್ಕಾರವು ನೋಂದಣಿ ಇಲಾಖೆಯನ್ನು ಕಂಪ್ಯೂಟರೀಕರಿಸುವ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿದೆ. ಮೌಲ್ಯ ನಿರ್ಣಯ ವಿಧಾನವನ್ನು ಕಂಪ್ಯೂಟರೀಕರಿಸುವ ಕಾರ್ಯ ನಡೆಯುತ್ತಿದ್ದು ಇದರಿಂದ ನೊಂದಣಿ ಅಧಾರಿಗಳು ವಿವೇಚನಾಧಿಕಾರ ಬಳಸುವುದನ್ನು ನಿವಾರಿಸಿದಂತಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ಎಲ್ಲಾ ಸ್ವತ್ತುಗಳ ಋಣಭಾರದ ವಿವರಗಳು ಇಂಟರ್‌ನೆಟ್ ಮೂಲಕ ದೊರಕುವಂತೆ ಮಾಡಲಾಗುತ್ತದೆ. ಮುಂದಿನ ಆರು ತಿಂಗಳಲ್ಲಿ 12 ತಾಲ್ಲೂಕುಗಳಲ್ಲಿ ಈ ಯೋಜನೆಯ ಕಾರ್ಯಾರಂಭ ಮಾಡಲಾಗುವುದು.

35. ಸಾರಿಗೆ ವಲಯಕ್ಕೆ ಒತ್ತು ನೀಡುವ ಮತ್ತು ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ನನ್ನ ಸರ್ಕಾರವು ಸಾರಿಗೆ ನೀತಿಯನ್ನು ಸಹ ರೂಪಿಸುತ್ತಿದೆ. ಗುಲ್ಬರ್ಗಾದಲ್ಲಿ ಕೇಂದ್ರ ಸ್ಥಾನವುಳ್ಳ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಸಹ 15-08-2000 ದಿಂದ ಅಸ್ತಿತ್ವಕ್ಕೆ ಬಂದಿದೆ. ಬೆಂಗಳೂರು ನಗರದಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಗಳ ಕಂಪ್ಯೂಟರೀಕರಣವು ಮುಕ್ತಾಯದ ಹಂತದಲ್ಲಿದೆ. ರಾಜ್ಯದಲ್ಲಿರುವ ಎಲ್ಲಾ ಇತರ ಪ್ರಾದೇಶಿಕ ಸಾರಿಗೆ ಕಚೇರಿಗಳ ಕಂಪ್ಯೂಟರೀಕರಣವನ್ನು ಹಂತಹಂತವಾಗಿ ಮಾಡಲಾಗುತ್ತದೆ.

36. ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಗಡಿ ಪ್ರದೇಶದ ಜನರು ಎದುರಿಸುತ್ತಿದ್ದ ಕುಡಿಯುವ ನೀರಿನ ಕೊರತೆಯನ್ನು ನೀಗಲು ಸಕಾಲದಲ್ಲಿ ಭೀಮಾ ನದಿಗೆ ನೀರನ್ನು ಬಿಡುಗಡೆ ಮಾಡಿದ ಮಹಾರಾಷ್ಟ್ರ ಸರ್ಕಾರಕ್ಕೆ ನನ್ನ ಸರ್ಕಾರವು ತನ್ನ ಕೃತಜ್ಞತೆಗಳನ್ನು ಸಲ್ಲಿಸಲಿಚ್ಚಿಸುತ್ತದೆ.

37. ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶದ ಪಾಂಡಿಚೇರಿಯ ನಡುವಣ ಕಾವೇರಿ ಜನ ವಿವಾದವು ನ್ಯಾಯಮಂಡಳಿಯ ಮುಂದಿದೆ. ನ್ಯಾಯಮಂಡಳಿಯಲ್ಲಿ ವಿಚಾರಣೆಯು ಮುಂದುವರಿದ ಹಂತದಲ್ಲಿದೆ. ನನ್ನ ಸರ್ಕಾರವು ನಮ್ಮ ರಾಜ್ಯದ ಕಾವೇರಿ ಕಣಿವೆ ಪ್ರದೇಶದ ರೈತರ ಹಿತಾಸಕ್ತಿಯನ್ನು ಸಂರಕ್ಷಿಸಲು ಬದ್ಧವಾಗಿದೆ ಎಂಬ ಭರವಸೆ ನೀಡಬಯಸುತ್ತೇನೆ.

38. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ, ಆಲಮಟ್ಟಿ ಜಲಾಶಯದಲ್ಲಿ 519.60 ಮೀಟರುಗಳ ಎತ್ತರದವರೆಗೆ ಕ್ರೆಸ್ಟ್ ಗೇಟುಗಳನ್ನು ಅಳವಡಿಸಲಾಗಿದೆ ಮತ್ತು ಮೊದಲ ಬಾರಿಗೆ ಈ ಜಲಾಶಯದಲ್ಲಿ ನೀರನ್ನು ಸಂಗ್ರಹಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಹಂತಕ್ಕೆ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ ಮತ್ತು ತ್ವರಿತ ನೀರಾವರಿ ಪ್ರಯೋಜನ ಕಾರ್ಯ ಕ್ರಮದ ಅಡಿಯಲ್ಲಿ ಹಣಕಾಸು ನೆರವು ಪಡೆದುಕೊಳ್ಳುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

39. ನೀರಾವರಿ ವಲಯದಲ್ಲಿ ಸಹಭಾಗಿ ವ್ಯವಸ್ಥೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ರಚಿಸಲಾಗುತ್ತಿದೆ. ಈಗಾಗಲೇ 872 ನೀರು ಬಳಕೆದಾರರ ಸಂಘಗಳು ಕಾರ್ಯಾರಂಭ ಮಾಡಿದೆ. ಘಟಪ್ರಭಾ ಎಡದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿನ ಹಾರೋಗೇರಿ ಸಮೀಪ ಯಬರಟ್ಟಿ ಗ್ರಾಮದ ಗ್ರಾಮಸ್ಥರು ಹಾರೋಗೇರಿ ನಾಲೆಗೆ ಅಡ್ಡಲಾಗಿರುವ ಪಿಕ್‌ಅಪ್ ಒಡ್ಡಿನಿಂದ ಪೂರಕ ನಾಲೆಯನ್ನು ನಿರ್ಮಿಸಲು ಸ್ವಇಚ್ಛೆಯಿಂದ ಮುಂದೆ ಬಂದು ಇತಿಹಾಸವನ್ನೇ ನಿರ್ಮಿಸಿದ್ದಾರೆ. ಹಾರೋಗೇರಿ ನೀರು ಬಳಕೆದಾರರ ಸಂಘದ ಪ್ರೇರಣೆಯ ಮೇರೆಗೆ ಕಾಲುವೆಗಳ ನಿರ್ಮಾಣದಲ್ಲಿ ರೈತರು ನಿರೀಕ್ಷೆಗೂ ಮೀರಿ ಶ್ರಮದಾನ ಮಾಡಿರುತ್ತಾರೆ. ಸರ್ಕಾರವು ಇಂಥ ಯಶಸ್ವಿ ಪ್ರಯೋಗಗಳನ್ನು ರಾಜ್ಯಾದ್ಯಂತ ಪ್ರೋತ್ಸಾಹಿಸಲು ನಿರ್ಧರಿಸಿದೆ.

40. 2000ದ ಡಿಸೆಂಬರ್ ಅಂತ್ಯಕ್ಕೆ 1394 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 31681 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. 2001ನೇ ಮಾರ್ಚ್ ಅಂತ್ಯದ ವೇಳೆಗೆ 81,000 ಹೆಕ್ಟೇರು ಹೆಚ್ಚುವರಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಮುಂಬರುವ ವರ್ಷದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ 1,20,000 ಹೆಕ್ಟೇರು ಭೂಮಿಗೆ ಮತ್ತು ಘಟಪ್ರಭಾ ಮಲಪ್ರಭಾ ಯೋಜನೆ ಅಡಿಯಲ್ಲಿ 16,100 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

41. ನೀರು ಮತ್ತು ಭೂ ನಿರ್ವಹಣಾ ಸಂಸ್ಥೆ ಮತ್ತು ಆರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಸರ್ಕಾರವು ರಚಿಸಿದ್ದ ಲೆಲೆ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಶಿಫಾರಸ್ಸುಗಳನ್ನು ಜಾರಿಗೊಳಿಸುವ ವಿಧಿವಿಧಾನಗಳನ್ನು ಪರಿಶೀಲಿಸಲಾಗುತ್ತಿದೆ.

42. ನೀರಾವರಿ ವಲಯದಲ್ಲಿ ಪಾರದರ್ಶಕತೆ ಮತ್ತು ಸ್ಪರ್ಧಾತ್ಮಕತೆ ತರುವ ಉದ್ದೇಶದಿಂದ ದರಪಟ್ಟಿಯ ದರಗಳಿಗಿಂತ ಹೆಚ್ಚಿನ ದರಗಳಲ್ಲಿ. ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಸಲ್ಲಿಸುವ ಸಾಮಾನ್ಯ ಪದ್ಧತಿಯನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಅದಕ್ಕೆ ಬದಲಾಗಿ ಈಗ ದರಪಟ್ಟಿ ದರಗಳಿಗಿಂತ ಶೇಕಡಾ 20 ರಿಂದ 35 ರಷ್ಟು ಕಡಿಮೆ ದರಗಳಲ್ಲಿ ಕಾಮಗಾರಿಗಳಿಗಾಗಿ ಟೆಂಡರುಗಳು ಬರುತ್ತಿವೆ. ಇದರಿಂದ ನಿರ್ಮಾಣ ವೆಚ್ಚಗಳಲ್ಲಿ ಸರ್ಕಾರಕ್ಕೆ ಗಣನೀಯ ಉಳಿತಾಯವಾಗುತ್ತಿದೆ.

43. ಸಣ್ಣ ನೀರಾವರಿ ಅಡಿಯಲ್ಲಿ ಈ ವರ್ಷ 1229 ಹೆಕ್ಟೇರ್ ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗಿದ್ದು, ಮುಂದಿನ ವರ್ಷದಲ್ಲಿ 5000 ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಪ್ರವಾಹ ನಿಯಂತ್ರಣ ಮತ್ತು ಕಡಲ ಕೊರೆತ ತಡೆಗಟ್ಟುವ ಯೋಜನೆಗಳಡಿಯಲ್ಲಿ 9000 ಮೀಟರುಗಳಷ್ಟು ಉದ್ದದ ದಂಡೆಯನ್ನು ಸಂರಕ್ಷಿಸುವ ಕಾಮಗಾರಿ ಸಹ ಪ್ರಗತಿಯಲ್ಲಿದೆ.

44. ನನ್ನ ಸರ್ಕಾರವು ಸಮುದಾಯ ಪಾಲ್ಗೊಳ್ಳುವ ವ್ಯವಸ್ಥೆಯ ಮೂಲಕ ಸುಮಾರು 5000 ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ವಿಶ್ವ ಬ್ಯಾಂಕ್ ಅಡಿಯಲ್ಲಿ ಒಂದು ಯೋಜನೆಯನ್ನು ಪ್ರಸ್ತಾಪಿಸಿದೆ. ಈ ಯೋಜನೆಯನ್ನು ತಜ್ಞರಿಂದ ನಿರ್ವಹಿಸಲು ಸರ್ಕಾರವು ಮುಖ್ಯ ಮಂತ್ರಿಗಳ

ಅಧ್ಯಕ್ಷತೆಯಲ್ಲಿ ಜಲ ಸಂವರ್ಧನೆ ಯೋಜನಾ ಸಂಘ(ಜೆಎಸ್‌ವೈಎಸ್) ಎಂಬ ಒಂದು ನೋಂದಾಯಿತ ಸಂಸ್ಥೆಯನ್ನು ''ನೋಡಲ್'' ಏಜನ್ಸಿಯನ್ನಾಗಿ ಸ್ಥಾಪಿಸಿದೆ. ಇದು ಯೋಜನೆ ರೂಪಿಸುವ ಮತ್ತು ಅದನ್ನು ಅನುಷ್ಠಾನಗೊಳಿಸುವ ಬಗ್ಗೆ ಬಹು ತಜ್ಞರ ಮಾರ್ಗದರ್ಶನ ಒದಗಿಸುತ್ತದೆ. ರಾಜ್ಯ ಸರ್ಕಾರವು, ಸಂಕಷ್ಟದಲ್ಲಿರುವ ರಾಜ್ಯದ 72 ತಾಲ್ಲೂಕುಗಳಲ್ಲಿ ಸುಮಾರು 1000 ಹಳೆಕಾಲದ ಕೆರೆಗಳ ಜೀರ್ಣೋದ್ಧಾರ ಮಾಡಲು ಸಹಾ ಹುಡ್ಕೋದಿಂದ ಹಣಕಾಸು ನೆರವನ್ನು ಕೋರಿದೆ.

45. 192 ಕಿ.ಮೀ. ಉದ್ದದ ಬಿಜಾಪುರ-ಹುಬ್ಬಳ್ಳಿ ರಸ್ತೆಯನ್ನು ರಾಜ್ಯದಲ್ಲಿನ 13ನೇ ರಾಷ್ಟ್ರೀಯ ಹೆದ್ದಾರಿಯೆಂದು (ರಾ.ಹೆ.218) ಕೇಂದ್ರ ಸರ್ಕಾರವು ಘೋಷಿಸಿದೆಯೆಂಬುದನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ಎರಡನೇ ಹಂತವನ್ನು ಕೂಡ ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ ಆಧಾರದ ಮೇಲೆ ಪೂರ್ಣಗೊಳಿಸಲಾಗಿದ್ದು ಸಂಚಾರಕ್ಕೆ ತೆರೆಯಲಾಗಿದೆ. ಪ್ರಸಕ್ತ ವರ್ಷದಲ್ಲಿ ನಬಾರ್ಡ್ ನೆರವಿನಿಂದ 72 ರಸ್ತೆಗಳನ್ನು ಮತ್ತು 17 ಸೇತುವೆಗಳನ್ನು ಪೂರ್ಣಗೊಳಿಸಲಾಗಿದೆ. ಇದೇ ಪ್ರಥಮ ಬಾರಿಗೆ, 7000 ಕಿಲೋಮೀಟರ್ ರಾಜ್ಯ ಹೆದ್ದಾರಿಗಳ ಜಿಲ್ಲಾವಾರು ನಿರ್ವಹಣೆಯನ್ನು ಮೂರು ವರ್ಷಗಳಿಗೆ ' ಗುತ್ತಿಗೆದಾರರಿಗೆ ವಹಿಸಲಾಗುತ್ತಿದೆ. ಈ ಯೋಜನೆಗೆ ಕೆಆರ್‌ಡಿಸಿಎಲ್ 200 ಕೋಟಿ ರೂಪಾಯಿಗಳ ನೆರವನ್ನು ಹುಡ್ಕೋದಿಂದ ತೆಗೆದುಕೊಳ್ಳುತ್ತದೆ.

46. ಸರ್ಕಾರವು, ಸಾರ್ವಜನಿಕರಿಗೆ ಎಟುಕಬಹುದಾದ ಬೆಲೆಯಲ್ಲಿ ಮನೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸುವ ತನ್ನ ಪ್ರಯತ್ನಗಳ ಅಂಗವಾಗಿ 100 ಗೃಹನಿರ್ಮಾಣ ಯೋಜನೆಗಳ ಭಾರೀ ಕಾರ್ಯಕ್ರಮಕ್ಕೆ ಮಂಜೂರಾತಿ ನೀಡಿದೆ. ಈ ಯೋಜನೆಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಕೈಗೊಳ್ಳುತ್ತದೆ. ಈ ಯೋಜನೆಗಳನ್ನು ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಕೈಗೊಳ್ಳಲಾಗುತ್ತದೆ. ಮುಂದಿನ ಎರಡು ವರ್ಷಗಳಲ್ಲಿ ಬೇರೆ ಬೇರೆ ವರಮಾನ ವರ್ಗಗಳಿಗೆ 13,500 ಮನೆಗಳನ್ನು ಕಟ್ಟಿಕೊಡಲಾಗುವುದು ಮತ್ತು 15,000 ನಿವೇಶನಗಳನ್ನು ರಚಿಸಲಾಗುವುದು.

47. ಒಂದು ಲಕ್ಷ ಮತ್ತು ಅದಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ 21 ನಗರಗಳಲ್ಲಿ ಕೊಳಗೇರಿ ಸುಧಾರಣೆಯ ಬೃಹತ್ ಕಾರ್ಯ ಕ್ರಮವಾದ ''ನಿರ್ಮಲ ಜ್ಯೋತಿ ಯೋಜನೆ''ಗೆ ಸರ್ಕಾರ ಮಂಜೂರಾತಿ ನೀಡಿದೆ. ಯೋಜನೆಯು 15 ಲಕ್ಷ ಜನಸಂಖ್ಯೆಯುಳ್ಳ 985 ಕೊಳೆಗೇರಿಗಳಲ್ಲಿ ನೀರು ಸರಬರಾಜು, ಸಮುದಾಯ ಶೌಚಗೃಹಗಳು, ಒಳಚರಂಡಿ, ರಸ್ತೆ ಸುಧಾರಣೆ, ಬೀದಿ ದೀಪಗಳು ಮತ್ತು ಸಮುದಾಯ ಭವನಗಳಂಥ ಮೂಲ ಸೌಕರ್ಯಗಳನ್ನು ಒದಗಿಸಲಿದೆ. ಕೊಳಗೇರಿ ನಿವಾಸಿಗಳು ತಮ್ಮ ಆದಾಯಗಳಿಕೆ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಂತೆ ಅವರಿಗೆ ಅವರ ಕುಶಲತೆಯ ಮಟ್ಟವನ್ನು ವರ್ಧಿಸಲು ತರಬೇತಿ ನೀಡಲಾಗುತ್ತದೆ. ಈ ಯೋಜನೆಯ ಒಟ್ಟು ವೆಚ್ಚ ಸುಮಾರು 274 ಕೋಟಿ ರೂಪಾಯಿಗಳು. ಇದರಲ್ಲಿ ಶೇಕಡಾ 80 ರಷ್ಟು ಹಣವನ್ನು ಹುಡ್ಕೋ ಸಂಸ್ಥೆ ಸಾಲವಾಗಿ ನೀಡಲಿದೆ ಮತ್ತು ಶೇಕಡಾ 20 ರಷ್ಟು ಹಣವನ್ನು ರಾಜ್ಯ ಸರ್ಕಾರ ನೀಡಲಿದೆ. ರಾಜ್ಯದಲ್ಲಿ ಇಂಥ ದೊಡ್ಡ ಪ್ರಮಾಣದ ಕೊಳಗೇರಿ ಸುಧಾರಣೆ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವುದು ಇದೇ ಮೊಟ್ಟಮೊದಲು.

48. ರಾಜ್ಯದಲ್ಲಿ ವಸತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಗಮನ ನೀಡುವ ಮತ್ತು ಅವುಗಳನ್ನು ಪರಿಣಾಮಕಾರಿಯಾಗಿಸುವಸಲುವಾಗಿ ರಾಜೀವ್ ಗಾಂಧಿ ಗೃಹನಿರ್ಮಾಣ ನಿಗಮವನ್ನು ಸ್ಥಾಪಿಸಲಾಗಿದೆ. 2 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಎಲ್ಲಾ ಆಶ್ರಯ ಸಮಿತಿಗಳನ್ನು ರಚಿಸಲಾಗಿದೆ. ಈಗಾಗಲೇ 70 ಕೋಟಿ ರೂಪಾಯಿಗಳ ಸಹಾಯ ಧನವನ್ನು ಬಿಡುಗಡೆ ಮಾಡಲಾಗಿದೆ. ಕಳೆದ ವರ್ಷ ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಸುಮಾರು 16,000 ಮನೆಗಳನ್ನು ನಿರ್ಮಿಸಲಾಗಿದ್ದು ಸುಮಾರು 10,000 ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ 32,000 ಮನೆಗಳನ್ನು ನಿರ್ಮಿಸಲಾಗುತ್ತಿದ್ದು 16,000 ಮನೆಗಳನ್ನು ಸುಧಾರಣೆ ಮಾಡಲಾಗುತ್ತಿದೆ. ಸೂಚಿಸಿರುವ ಮೌಲ್ಯಕ್ಕಿಂತ ಶೇಕಡಾ 20 ರವರೆಗೆ ಹೆಚ್ಚಿನ ಮೌಲ್ಯ ನೀಡಿ ನಿವೇಶನಗಳಿಗಾಗಿ ಭೂಮಿಯನ್ನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ.

49. ನನ್ನ ಸರ್ಕಾರವು, ರಾಜ್ಯದ ಎಲ್ಲ ಪಟ್ಟಣಗಳು ಮತ್ತು ನಗರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಉದ್ದೇಶಕ್ಕಾಗಿ, ಸರ್ಕಾರವು ಹುಡ್ಕೋದಿಂದ 100 ಕೋಟಿ ರೂಪಾಯಿಗಳ ಸಾಲವನ್ನು ಪಡೆದುಕೊಳ್ಳುತ್ತಿದೆ. ಯೋಜನೆಯನ್ನು ಈಗಾಗಲೇ 2000ದ ಡಿಸೆಂಬರ್ ತಿಂಗಳಿನಲ್ಲಿ ಪ್ರಾರಂಭ ಮಾಡಲಾಗಿದೆ.

50. ಕರಾವಳಿ ಪಟ್ಟಣಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸುವ ಉದ್ದೇಶದಿಂದ ಹತ್ತು ಕರಾವಳಿ ಪಟ್ಟಣಗಳಲ್ಲಿ ಏಷಿಯಾ ಅಭಿವೃದ್ಧಿ ಬ್ಯಾಂಕ್ ನೆರವಿನ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯ 1063 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೀರು ಸರಬರಾಜು, ಪುನರ್ವಸತಿ ಮತ್ತು ವಿಸ್ತರಣೆ, ನಗರ ಪರಿಸರ ಸುಧಾರಣೆ, ರಸ್ತೆ ಮತ್ತು ಸೇತುವೆ ಸುಧಾರಣೆ, ಕರಾವಳಿ ಪರಿಸರ ನಿರ್ವಹಣೆ ಮುಂತಾದ ಕಾರ್ಯಗಳನ್ನು ಒಳಗೊಳ್ಳುತ್ತದೆ.

51. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ 2001ರ ಜನವರಿ 19ರಂದು ಯೋಜನಾ ಕಾಮಗಾರಿಯನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಉದ್ಘಾಟನೆ ಮಾಡಿದ್ದಾರೆ.

52. ರಾಜ್ಯದಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳ ಅನುಷ್ಠಾನವನ್ನು ವಿಶೇಷ ಕಾರ್ಯವಿಧಾನದ ಮೂಲಕ ತ್ವರಿತಗೊಳಿಸುವ ಉದ್ದೇಶಕ್ಕಾಗಿ ಕರ್ನಾಟಕವು ಭಾರತೀಯ ರೈಲ್ವೆ ಇಲಾಖೆಯೊಂದಿಗೆ ಒಡಂಬಡಿಕೆ ಪತ್ರ ಮಾಡಿಕೊಂಡ ಪ್ರಪ್ರಥಮ ರಾಜ್ಯ ಎಂಬುದು ಸದಸ್ಯರಿಗೆ ತಿಳಿದೇ ಇದೆ. 4 ಯೋಜನೆಗಳನ್ನು ಗುರುತಿಸಲಾಗಿದ್ದು ಹೊಸ ನಿಗಮವು ಸದ್ಯದಲ್ಲೇ ಕಾರ್ಯಾರಂಭಗೊಳ್ಳಲಿದೆ.

53. ನನ್ನ ಸರ್ಕಾರವು, ರಾಜ್ಯದ ಜನತೆ ಆರೋಗ್ಯ ಸುಧಾರಣೆಗೆ ಕಳೆದ ವರ್ಷದಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಮಹಿಳೆಯರ ಆರೋಗ್ಯ ಸುಧಾರಣೆಗಾಗಿ ಎರಡು ಮುಖ್ಯ ಯೋಜನೆಗಳನ್ನು ಸುರಕ್ಷಾ ಹೆರಿಗೆ ಯೋಜನೆ ಮತ್ತು ಗ್ರಾಮೀಣ ಮಹಿಳೆಯರಿಗೆ ದೈಹಿಕ ಸ್ವಚ್ಛತಾ

ಕಿಟ್‌ಗಳನ್ನು ಒದಗಿಸುವ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧ ಸರಬರಾಜನ್ನು ಸುಗಮಗೊಳಿಸಲಾಯಿತು. ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರಕ್ಕೆ ಔಷಧಿಯನ್ನು ಖರೀದಿಸಲು ಅನುದಾನವನ್ನು 25,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಖಾಲಿಯಿದ್ದ ಹುದ್ದೆಗಳನ್ನು ತುಂಬುವ ಸಲುವಾಗಿ 400ಕ್ಕೂ ಹೆಚ್ಚು ವೈದ್ಯರು 860 ಪ್ರಯೋಗಾಲಯ ತಂತ್ರಜ್ಞರು ಮತ್ತು ಇತರೆ ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ.

54. ರಾಜ್ಯವು ಪೋಲಿಯೋ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವ ಹಂತದಲ್ಲಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಪೋಲಿಯೋ ನಿರ್ಮೂಲನಾ ಆಂದೋಲನದ ಮೂಲಕ ಕೈಗೊಂಡ ಕ್ರಮಗಳಿಂದ ಈ ವರ್ಷ ಕರ್ನಾಟಕವನ್ನು ಪೋಲಿಯೋ ಮುಕ್ತ ರಾಜ್ಯವೆಂದು ಘೋಷಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಭರವಸೆ ನನಗಿದೆ.

55. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರು ಕಾರ್ಯನಿರ್ವಹಿಸುವಂತೆ ಮಾಡಲು ಕೌನ್ಸಲಿಂಗ್ ಮೂಲಕ ಅವರನ್ನು ನಿಯುಕ್ತಿ ಮಾಡುವುದು ವಸತಿ ಗೃಹಗಳನ್ನು ಒದಗಿಸದಿರುವ ವೈದ್ಯರಿಗೆ ಬಾಡಿಗೆಯಾಗಿ ತಿಂಗಳಿಗೆ 1,000 ರೂಪಾಯಿಗಳನ್ನು ನೀಡುವುದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ವಸತಿಗೃಹಗಳ ದುರಸ್ತಿಗೆ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ಸೇರಿದಂತೆ ಹಲವಾರು ಮಹತ್ವದ ಕ್ರಮಗಳನ್ನು ನನ್ನ ಸರ್ಕಾರವು ಪ್ರಾರಂಭಿಸಿದೆ.

56. ಕಾರ್ಯಪಡೆಯ ಶಿಫಾರಸುಗಳ ಆಧಾರದ ಮೇಲೆ ಮತ್ತು ಎಲ್ಲ ಹಿತಾಸಕ್ತಿದಾರರ ಜೊತೆ ನಡೆಸಿದ ವ್ಯಾಪಕ ಚರ್ಚೆಯ ಫಲವಾಗಿ ನನ್ನ ಸರ್ಕಾರವು, ಮುಂಬರುವ ವರ್ಷದಲ್ಲಿ ರಾಜ್ಯಕ್ಕೆ ಒಂದು ಸಮಗ್ರ ಆರೋಗ್ಯ ಮತ್ತು ಜನಸಂಖ್ಯಾ ನೀತಿಯನ್ನು ಪ್ರಕಟಿಸಲು ಉದ್ದೇಶಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳನ್ನು ಸುಧಾರಿಸುವ ಕಾರ್ಯದಲ್ಲಿ ಸರ್ಕಾರದ ಪ್ರಯತ್ನಗಳಿಗೆ ಬೆಂಬಲ ನೀಡಲು ಹಲವಾರು ಸರ್ಕಾರೇತರ ಪ್ರಯತ್ನಗಳಿಗೆ ಬೆಂಬಲ ನೀಡಲು ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳೊಂದಿಗೆ ಪಾಲುಗಾರಿಕೆಯನ್ನು ಮಾಡಿಕೊಳ್ಳಾಲಾಗಿದೆ. ಸುಮಾರು 1,000 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯಕ ಪ್ರಯೋಗಾಲಯ ಸಲಕರಣೆಗಳನ್ನು ಮತ್ತು ಬಳಕೆ ವಸ್ತುಗಳನ್ನು ಒದಗಿಸಲಾಗಿದೆ.

57. ಪಶುಸಂಗೋಪನೆ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಸುಧಾರಿಸುವ ಉದ್ದೇಶದಿಂದ, ಒಂದು ರೋಗಮುಕ್ತ ವಲಯದ ಸ್ಥಾಪನೆಯೂ ಸೇರಿದಂತೆ 26 ಕೋಟಿ ರೂಪಾಯಿ ವೆಚ್ಚದ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕಾಗಿ ಎನ್. ಡಿ. ಡಿ. ಬಿ. ಯೊಂದಿಗೆ ಒಂದು ಒಡಂಬಡಿಕೆ ಪತ್ರವನ್ನು ಮಾಡಿಕೊಳ್ಳಲಾಗಿದೆ. ಬೆಂಗಳೂರಿನ ಪಶು ಆರೋಗ್ಯ ಮತ್ತು ಪಶುವೈದ್ಯ ಜೀವಶಾಸ್ತ್ರ ಸಂಸ್ಥೆಯಲ್ಲಿ ದಕ್ಷಿಣ ಪ್ರದೇಶ ರೋಗ ಪತ್ತೆ ಶಾಸ್ತ್ರದ ಪ್ರಯೋಗಾಲಯವನ್ನು ಸ್ಥಾಪಿಸುವುದಕ್ಕಾಗಿ ಕರ್ನಾಟಕವನ್ನು ಆಯ್ಕೆ ಮಾಡಲಾಗಿದೆ ಎಂಬ ವಿಷಯವನ್ನು ತಿಳಿಸಲು ಸಹ ನನಗೆ ಬಹಳ ಸಂತೋಷವಾಗುತ್ತದೆ. ಈ ಪ್ರಯೋಗಾಲಯದಲ್ಲಿ ರೋಗ ತಪಾಸಣೆ ಮತ್ತು ರೋಗ ಪತ್ತೆಗೆ ನವೀನಾತಿನವೀನ ರೋಗ ಪತ್ತೆ ಉಪಕರಣಗಳಿರುತ್ತವೆ.

58. ರಾಜ್ಯದಲ್ಲಿ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವುದಕ್ಕಾಗಿ 2000ದ ಜೂನ್-ಜುಲೈ ಅವಧಿಯಲ್ಲಿ ''ವಿಶ್ವ ಬಂಡವಾಳಹೂಡಿಕೆದಾರರ ಸಮಾವೇಶ''ವನ್ನು ವ್ಯವಸ್ಥೆ ಮಾಡಲಾಗಿತ್ತು. ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿ, 27,000 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ಸುಮಾರು 1 ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸುವ 254 ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿದೆ.

59. ಪ್ರತಿಯೊಂದು ಜಿಲ್ಲೆಯನ್ನೂ ಕೈಗಾರಿಕೀಕರಣಕ್ಕೆ ಒಳಪಡಿಸುವುದಕ್ಕಾಗಿ ಒಂದು ಕಾರ್ಯಾಚರಣಾ ಯೋಜನೆಯನ್ನು ಸಿದ್ದಪಡಿಸಲಾಗುತ್ತಿದೆ. ಆಧುನೀಕರಣ ಮತ್ತು ತಂತ್ರಜ್ಞಾನ ಉನ್ನತೀಕರಣ ಯೋಜನೆಯನ್ನು ರಾಜ್ಯ ವಲಯದಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಿ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವುದಕ್ಕೆ ಸಮರ್ಥವಾಗುವಂತೆ ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ನೆರವು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

60. ಹಣ್ಣು ಮತ್ತು ತರಕಾರಿಗಳು ಮಾಂಸ ಮತ್ತು ಹಾಲು ಉತ್ಪನ್ನಗಳು ಒಳಗೊಂಡಂತೆ ಆಹಾರ ಸಂಸ್ಕರಣ ಕೈಗಾರಿಕೆಯು, ರೈತ ಸಮುದಾಯದ ಏಳಿಗೆ ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸುವ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದುದರಿಂದ ಕೇಂದ್ರ ಸರ್ಕಾರದ ನೆರವಿನೊಂದಿಗೆ ಆರಂಭದಲ್ಲಿ ಬೆಳಗಾವಿ, ಬಾಗಲಕೋಟೆ, ಮಾಲೂರು, ಮದ್ದೂರು ಮತ್ತು ಚಿತ್ರದುರ್ಗಗಳಲ್ಲಿ ಐದು ಆಹಾರ ಸಂಸ್ಕರಣಾ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

61. ಸರ್ಕಾರವು ರಾಜ್ಯದಲ್ಲಿ ಒಂದು ಹೊಸ ಖನಿಜ ನೀತಿಯನ್ನು ಜಾರಿಗೆ ತಂದಿದೆ. ಅನೇಕ ಭಾರತೀಯ ಮತ್ತು ವಿದೇಶಿ ಕಂಪನಿಗಳು ಮಧ್ಯ ಮತ್ತು ಉತ್ತರ ಕರ್ನಾಟಕದಲ್ಲಿ ಶೋಧನಾ ಕಾರ್ಯಗಳನ್ನು ಈಗಾಗಲೇ ಆರಂಭಿಸಿವೆ. ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಗಣಕೀಕರಿಸಿ ವೆಬ್‌ಸೈಟ್‌ನಲ್ಲಿ ಸೇರಿಸಲಾಗಿದೆ. ಶೇ.50ಕ್ಕೂ ಮೀರಿ ಅಂತರ್ಜಲ ಬಳಸುವ 72 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗುವಂತೆ ಮಾಡಲು ಕೃತಕ ಜಲ ಪ್ರವರ್ಧನ ರಚನೆಗಳ ನಿರ್ಮಾಣವು ಅತ್ಯಗತ್ಯವಾಗಿದೆ. ಅಂತರ್ಜಲ ಮಟ್ಟಗಳನ್ನು ಪುನರುಜ್ಜೀವನಗೊಳಿಸಲು ಈ ಎಲ್ಲಾ ತಾಲ್ಲೂಕುಗಳಲ್ಲಿ ಕೃತಕ ಜಲಪ್ರವರ್ಧನ ರಚನೆಗಳ ನಿರ್ಮಾಣವನ್ನು ಕೈಗೊಳ್ಳಲಾಗುವುದು.

62. ಕೈಗೆಟುಕುವ ಬೆಲೆಗಳಲ್ಲಿ ಶ್ರೀಸಾಮಾನ್ಯನಿಗೆ ಅಗತ್ಯ ವಸ್ತು ಪೂರೈಕೆ ಎಂಬ ''ಕಾಮನ್ ಮ್ಯಾಪ್'' ವಿಶೇಷ ಯೋಜನೆಯನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಜಾರಿಗೆ ತರುತ್ತಿದೆ. ಇದರಿಂದಾಗಿ ಬಹುತೇಕ ಕುಟುಂಬಗಳು ದಿನನಿತ್ಯದ ವಸ್ತುಗಳನ್ನು ಕೈಗೆಟುಕುವ ಬೆಲೆಯಲ್ಲಿ ಪಡೆಯಲು ಸಾಧ್ಯವಾಗುತ್ತದೆ. ಶ್ರೀಸಾಮಾನ್ಯರ ದೈನಂದಿನ ಅಗತ್ಯ ವಸ್ತುಗಳ ಈ ಯೋಜನೆಯಲ್ಲಿ ಆಹಾರ ವಸ್ತುಗಳನ್ನು ಗುರುತಿಸಲಾಗಿದ್ದು, ಇವುಗಳಲ್ಲಿ ಪ್ರಮುಖ ಮತ್ತು ದುಬಾರಿ ವಸ್ತುಗಳೆಂದರೆ:! (1) ತೊಗರಿಬೇಳೆ (2) ಸೂರ್ಯಕಾಂತಿ ಎಣ್ಣೆ (3) ತಾಳೆ ಎಣ್ಣೆ (4) ಕಡ್ಲೆ ಕಾಯಿ ಎಣ್ಣೆ (5) ಕೊಬ್ಬರಿ ಎಣ್ಣೆ (5) ಕೊಬ್ಬರಿ ಎಣ್ಣೆ (6) ಗೋಧಿ ಹಿಟ್ಟು (7) ರವೆ (8) ಮೈದಾ (9) ರಾಗಿ (10) ಅಯೋಡೈಜ್ಡ್ ಹರಳು ಉಪ್ಪು (11) ಅಯೋಡೈಜ್ಡ್ ಪುಡಿ ಉಪ್ಪು (12) ಸಾಬೂನುಗಳು ಮತ್ತು ಕ್ಲೀನಿಂಗ್ ಪೌಡರ್ (13) ಟೀ (14) ಬೆಂಕಿ ಪೊಟ್ಟಣ. ಈ ಪ್ರತಿಯೊಂದು ವಸ್ತುವನ್ನು ಮಾರುಕಟ್ಟೆ ಬೆಲೆಗಿಂತ ಪ್ರತಿ ಕಿಲೋ ಗ್ರಾಂಗೆ ಎರಡು ರೂಪಾಯಿ ಕಡಿಮೆ ದರದಲ್ಲಿ ಒದಗಿಸಬೇಕೆಂದು ಉದ್ದೇಶಿಸಲಾಗಿದೆ. ಸರಾಸರಿ 5

ಜನರಿರುವಂತಹ ಮಧ್ಯಮ ವರ್ಗದ ಕುಟುಂಬವು ಈ ''ಕಾಮನ್‌ಸ್ಯಾಪ್'' ಯೋಜನೆಯ ಪ್ರಯೋಜನ ಪಡೆದುಕೊಂಡಲ್ಲಿ ತಿಂಗಳಿಗೆ ಸುಮಾರು 150 ರಿಂದ 200 ರೂಪಾಯಿ ಉಳಿತಾಯ ಮಾಡಬಹುದು. ಯಾರೇ ಆದರೂ ಈ ಯಾವುದೇ ವಸ್ತುಗಳನ್ನು ಕೊಳ್ಳಬಹುದಾಗಿದ್ದು, ಈ ಯೋಜನೆಯಡಿಯಲ್ಲಿ ಪಡಿತರ ಚೀಟಿಯನ್ನು ಪಡೆಯುವ ಅಗತ್ಯವಿರುವುದಿಲ್ಲ.

63. ಕರ್ನಾಟಕ ಸರ್ಕಾರವು, ರಾಜ್ಯದ ವಿದ್ಯುತ್ ವಲಯದಲ್ಲಿ ಸುಧಾರಣೆ ತರುವ ಮತ್ತು ಅದನ್ನು ಪುನರ್ ರಚಿಸುವ ಹೊಣೆಗಾರಿಕೆಯನ್ನು ನಿರ್ವಹಿಸುವ ನಿಟ್ಟಿನಲ್ಲಿ ತನ್ನ ಪ್ರಯತ್ನಗಳನ್ನು ಮುಂದುವರಿಸಿದೆ. ರಾಜ್ಯ ಸರ್ಕಾರವು ರಾಜ್ಯದಲ್ಲಿ ಸಾಕಷ್ಟು ವಿದ್ಯುತ್ತನ್ನು ಉತ್ಪಾದಿಸಲು, ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಅಗತ್ಯತೆ ಮತ್ತು ಅಧಿಕ ಸಾಮರ್ಥ್ಯದ ದೃಷ್ಟಿಯಿಂದ ಸ್ವತಂತ್ರ ವಿದ್ಯುತ್ ಉತ್ಪಾದಕರ ನೀತಿಯನ್ನು ರೂಪಿಸಿದೆ.

64. ಸಂಪೂರ್ಣ ಸ್ವತಂತ್ರ ರೀತಿಯಲ್ಲಿ ಕಾರ್ಯಾರಂಭ ಮಾಡಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತನ್ನ ಮೊದಲ ವಿದ್ಯುತ್ ದರದ ಆದೇಶವನ್ನು ನೀಡಿದೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಸಾರ್ವಜನಿಕರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಿ, ಸಂಪೂರ್ಣ ಪಾರದರ್ಶಕವಾಗಿ ದರಗಳ ಪರಿಷ್ಕರಣೆ ಮಾಡಲಾಗಿದೆ. ಈ ವರ್ಷ ರಾಜ್ಯದ ರೈತರು ಎದುರಿಸಿದಂಥ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಕೃಷಿಗೆ ಸಂಬಂಧಿಸಿದಂತೆ ರೈತರಿಗೆ 10 ಅಶ್ವಶಕ್ತಿಯವರೆಗೆ ಈಗಿರುವ ವಿದ್ಯುತ್ ದರಕ್ಕೆ ಸಬ್ಸಿಡಿ ನೀಡುವುದನ್ನು ಮುಂದುವರಿಸಲು ಹಾಗೂ 144 ಕೋಟಿ ರೂಪಾಯಿಗಳಷ್ಟಾಗುವ ಈ ಕೊರತೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ತುಂಬಿಕೊಡಲು ನನ್ನ ಸರ್ಕಾರ ನಿರ್ಧರಿಸಿದೆ. ಇದು ನನ್ನ ಸರ್ಕಾರಕ್ಕೆ ರಾಜ್ಯದ ರೈತರ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ.

65. ಸಾಂಪ್ರದಾಯಿಕವಲ್ಲದ ಮೂಲದಿಂದ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಉತ್ತಮ ಫಲಿತಾಂಶಗಳನ್ನು ನೀಡಿವೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. 2000ದ ಇಸವಿಯ ಡಿಸೆಂಬರ್ ಅಂತ್ಯದ ವೇಳೆಗೆ 40 ಯೋಜನೆಗಳ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 260 ಮೆಗವ್ಯಾಟ್‌ಗಳಷ್ಟಾಗಿದೆ.

66. ಕರ್ನಾಟಕ ವಿದ್ಯುತ್ ನಿಗಮವು ರಾಜ್ಯದ ಬೃಹತ್ ಉತ್ಪಾದನಾ ಸಂಸ್ಥೆಯಾಗಿದ್ದು, ರಾಜ್ಯದ ವಿದ್ಯುತ್ ಅಗತ್ಯತೆಯ ಮುಕ್ಕಾಲು ಬೇಡಿಕೆಯನ್ನು ಪೂರೈಸುತ್ತದೆ. ಗೇರುಸೊಪ್ಪ ಯೋಜನೆಯಲ್ಲಿ 2001-2002ರಲ್ಲಿ ಪ್ರತಿಯೊಂದು 60 ಮೆಗಾ ವ್ಯಾಟ್ ಸಾಮರ್ಥ್ಯದ 3 ಮತ್ತು 4ನೇ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 210 ಮೆಗಾ ವ್ಯಾಟ್ ಸಾಮರ್ಥ್ಯದ 7ನೆಯ ಘಟಕದ ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದು, 28 ತಿಂಗಳಲ್ಲಿ ಪೂರ್ಣಗೊಳಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಅತ್ಯುತ್ತಮ ಕಾರ್ಯದಕ್ಷತೆಯನ್ನು ಗಮನಿಸಿ ನನ್ನ ಸರ್ಕಾರವು 297 ಮೆಗಾ ವ್ಯಾಟ್ ಸ್ಥಾಪಿತ ಸಾಮರ್ಥ್ಯದ ಅಲಮಟ್ಟಿ ವಿದ್ಯುತ್ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮಕ್ಕೆ ವಹಿಸಲು ತೀರ್ಮಾನಿಸಿದೆ. ಕರ್ನಾಟಕ ವಿದ್ಯುತ್ ನಿಗಮವು ಹೊಸ ಯೋಜನೆಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಮೂಲ ಸೌಲಭ್ಯ ಅಭಿವೃದ್ಧಿ ಹಣಕಾಸು ನಿಗಮದೊಂದಿಗೆ ಸುಧಾರಣೆ ಆಧಾರಿತ ಬಹುಪಕ್ಷೀಯ ಹಣಕಾಸು ಒಪ್ಪಂದಕ್ಕೆ ಸಹಿ ಮಾಡಿದ ಪ್ರಥಮ ರಾಜ್ಯ ಕರ್ನಾಟಕವಾಗಿದೆ.

67. ಕರ್ನಾಟಕವು ತ್ವರಿತಗತಿಯ ವಿದ್ಯುತ್ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವು ಪಡೆದ ಪ್ರಥಮ ರಾಜ್ಯ ಎಂಬುದನ್ನು ಸದಸ್ಯರಿಗೆ ತಿಳಿಸಲು ನನಗೆ ಸಂತಸವಾಗುತ್ತದೆ. ಈ ಕಾರ್ಯಕ್ರಮದ ಅಡಿ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವಲಯಗಳಲ್ಲಿ ಗ್ರಾಮೀಣ ವಿದ್ಯುತ್ ಸರಬರಾಜು ಉತ್ತಮಪಡಿಸಲು ನಮ್ಮ ರಾಜ್ಯವು 2001-2002ನೇ ಸಾಲಿನಲ್ಲಿ 294 ಕೋಟಿ ರೂ.ಗಳನ್ನು ಪಡೆಯಲಿದೆ.

68. ಗ್ರಾಮೀಣ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ನ್ಯಾಯವಾದ ಪಾಲು ದೊರಕುವ ಬಗ್ಗೆ ವಿವಿಧ ವಿಚಾರಗಳನ್ನು ಪರಿಶೀಲಿಸಲು ಉಚ್ಚ ನ್ಯಾಯಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಆರ್. ರಾಮಕೃಷ್ಣರವರ ಅಧ್ಯಕ್ಷತೆಯಲ್ಲಿ ವಿಚಾರಣಾ ಆಯೋಗವನ್ನು ರಚಿಸಿತ್ತು. ಆಯೋಗವು, 2000ದ ಅಕ್ಟೋಬರ್‌ನಲ್ಲಿ ತನ್ನ ವರದಿಯನ್ನು ಸಲ್ಲಿಸಿತು ಇಡೀ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿದ ತರುವಾಯ, ರಾಜ್ಯದ ಸರ್ಕಾರಿ ಸೇವೆಯಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಮೀಸಲಾತಿಯನ್ನು ನೀಡುವ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗೆ (ರಾಜ್ಯದ ನಾಗರಿಕ ಸೇವೆಯಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮವನ್ನು ತರಲಾಗಿದೆ.

69. ನನ್ನ ಸರ್ಕಾರದ ಪ್ರಗತಿಪರ ಹಾಗೂ ದೂರ ದೃಷ್ಟಿಯ ನೀತಿಗಳಿಂದಾಗಿ ಕರ್ನಾಟಕಕ್ಕೆ ವಿಶ್ವ ಭೂಪಟದಲ್ಲಿ ಸ್ಥಾನ ದೊರಕಿದೆ. ಅನೇಕ ಅಂತರ ರಾಷ್ಟ್ರೀಯ ಗಣ್ಯ ವ್ಯಕ್ತಿಗಳು ನಮ್ಮ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ಮುಖ್ಯವಾಗಿ, 2000ದ ನವೆಂಬರ್‌ನಲ್ಲಿ ವಿಶ್ವಬ್ಯಾಂಕಿನ ಅಧ್ಯಕ್ಷರು ಭೇಟಿ ನೀಡಿದ್ದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದುವರೆಗೆ ನಾವು ಮಾಡಿರುವ ಕೆಲಸವನ್ನು ಮೆಚ್ಚಿ, ವಿವಿಧ ವಲಯಗಳಲ್ಲಿ ಸುಧಾರಣೆಗಳನ್ನು ತರುವುದಕ್ಕಾಗಿ ಕರ್ನಾಟಕ ರಾಜ್ಯಕ್ಕೆ 12,000 ಕೋಟಿ ರೂ.ಗಳ ವಿಶ್ವಬ್ಯಾಂಕ್ ಸಾಲ ನೀಡುವುದಾಗಿ ಅವರು ಒಪ್ಪಿಕೊಂಡಿದ್ದಾರೆ ಈ ಸುಧಾರಣೆಯಲ್ಲಿ ಆರ್ಥಿಕ ನೀತಿ, ವಿದ್ಯುತ್ ವಲಯ ಮತ್ತು ಆಡಳಿತ ಕ್ಷೇತ್ರಗಳು ಒಳಗೊಂಡಿರುತ್ತವೆ. 2001 ರಿಂದ 2004-2005ರ ವರೆಗಿನ ಒಂದು ಮಧ್ಯಾವಧಿ ಯೋಜನೆಯನ್ನು ವಿಧಾನಮಂಡಲದ ಮುಂದೆ ಮಂಡಿಸಲಾಗುವುದು. ವಿದ್ಯುತ್ ವಲಯದ ಸುಧಾರಣೆಗಳು ಮುಖ್ಯವಾಗಿ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸುವ ಪ್ರಸರಣ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಡಿಮೆ ಮಾಡುವ ಮತ್ತು ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯನ್ನು ಆರ್ಥಿಕವಾಗಿ ಸಮರ್ಥವಾಗಿಸಲು ಅದರ ಕಾರ್ಯಗಳನ್ನು ಸರಳಗೊಳಿಸುವ ಅಂಶಗಳ ಬಗ್ಗೆ ಹೆಚ್ಚು ಗಮನ ನೀಡಿವೆ.

70. ರಾಜ್ಯದ ತೆರಿಗೆ ರಚನೆಯನ್ನು ಸರಳಗೊಳಿಸಿ, ರಾಜ್ಯದ ಆದಾಯವನ್ನು ಹೆಚ್ಚಿಸುವ ಮತ್ತು ಸಾರ್ವಜನಿಕ ಹಣಕಾಸು ವ್ಯವಸ್ಥೆ ಸ್ಥಿರಗೊಳಿಸುವ ದೃಷ್ಟಿಯಿಂದ, ನನ್ನ ಸರ್ಕಾರವು ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರ ನೇತೃತ್ವದಲ್ಲಿ ತೆರಿಗೆ ಸುಧಾರಣಾ ಆಯೋಗವನ್ನು ರಚಿಸಿತ್ತು. ಆಯೋಗವು ವರದಿಯನ್ನು ಸಲ್ಲಿಸಿದ್ದು, ಅದರ ಶಿಫಾರಸುಗಳನ್ನು ಪರಿಶೀಲಿಸಲಾಗುತ್ತಿದೆ.

71. ನನ್ನ ಸರ್ಕಾರವು ಉತ್ತಮ ಆಡಳಿತವನ್ನು ನೀಡಲು ಬದ್ಧವಾಗಿದೆ. ಸದ್ಯದಲ್ಲೇ ಅದು ಆಡಳಿತ ಕಾರ್ಯತಂತ್ರ ಮತ್ತು ಕಾರ್ಯ ಯೋಜನೆಯನ್ನು ರೂಪಿಸಲಿದೆ. ನನ್ನ ಸರ್ಕಾರವು ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ 2000ದ ಏಪ್ರಿಲ್‌ನಲ್ಲಿ ಶ್ರೀ ಹಾರನಳ್ಳಿ ರಾಮಸ್ವಾಮಿಯವರ

ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿದೆ ಎಂಬುದು ನಿಮಗೆಲ್ಲ ತಿಳಿದೇ ಇದೆ. ಆಯೋಗವು ಮಧ್ಯಂತರ ವರದಿಯನ್ನು ಈಗ ಸಲ್ಲಿಸಿದೆ. ಅದರಲ್ಲಿ ಸ್ಪಂದಿಸುವಂತೆ ಮಾಡಲು ಅನೇಕ ಶಿಫಾರಸುಗಳನ್ನು ಮಾಡಿದೆ. ಆಯೋಗದ ಶಿಫಾರಸು ಸಚಿವಾಲಯದ ಆಡಳಿತ, ಜಿಲ್ಲಾ ಮಟ್ಟದ ಆಡಳಿತ ಮತ್ತು ಉತ್ತಮ ಆಳ್ವಿಕೆ ಈ ಮೂರು ಕ್ಷೇತ್ರಗಳಿಗೆ ಸಂಬಂಧಿಸಿದೆ. ಸರ್ಕಾರವು ಈ ಶಿಫಾರಸುಗಳನ್ನು ಪರಿಶೀಲಿಸುತ್ತಿದೆ. ಸಿವಿಲ್ ಸೇವೆಗಳಲ್ಲಿ ಸುಧಾರಣೆ ತಂದು ಆ ಮೂಲಕ ಸರ್ಕಾರದ ಎಲ್ಲಾ ಮಟ್ಟಗಳಲ್ಲಿ ಜನಪರ ಆಡಳಿತವನ್ನು ಕೊಡಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ.

72. ಉತ್ತಮ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಬಹಳ ಮುಖ್ಯ. ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ ಮತ್ತು ಕರ್ನಾಟಕ ಟೆಂಡರುಗಳು ಮತ್ತು ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಎಂಬ ಎರಡು ಮಹತ್ವಪೂರ್ಣ ಅಧಿನಿಯಮಗಳನ್ನು ತರುವ ಮೂಲಕ ಈ ದಿಸೆಯಲ್ಲಿ ನನ್ನ ಸರ್ಕಾರ ದೃಢವಾದ ಹೆಜ್ಜೆಗಳನ್ನು ಇಟ್ಟಿದೆ. ಮೊದಲನೆಯ ಅಧಿನಿಯಮ ಜನತೆಗೆ ಸರ್ಕಾರದ ಕಾರ್ಯಗಳು ಮತ್ತು ತೀರ್ಮಾನಗಳ ಬಗ್ಗೆ ಮಾಹಿತಿ ಪಡೆಯುವ ಹಕ್ಕನ್ನು ನೀಡುತ್ತದೆ. ಎರಡನೆಯ ಅಧಿನಿಯಮವು ಸಾರ್ವಜನಿಕ ನಿಧಿಗಳನ್ನು ವೆಚ್ಚ ಮಾಡುವಲ್ಲಿ ಹೊಣೆಗಾರಿಕೆಯನ್ನು ವಿಧಿಸುತ್ತದೆ.

73. ನನ್ನ ಸರ್ಕಾರವು ತಾನು ಮೊದಲಿನಿಂದಲೂ ಹೇಳುತ್ತಿರುವಂತೆಯೇ ಮಹಾಜನ್ ಆಯೋಗದ ತೀರ್ಪೇ ಅಂತಿಮ ಮತ್ತು ಆ ಬಗ್ಗೆ ಯಾವುದೇ ಬಗೆಯ ವಿವಾದಕ್ಕೆ ಆಸ್ಪದವಿಲ್ಲ ಎಂದು ಸ್ಪಷ್ಟವಾಗಿ ಒತ್ತಿ ಹೇಳುತ್ತದೆ. ಕೇಂದ್ರ ಸರ್ಕಾರವು ಆ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಆಗ್ರಹಪಡಿಸುತ್ತದೆ.

74. ಈ ಘನತೆವೆತ್ತ ಸದನದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವ ಸದವಕಾಶ ದೊರೆತಿರುವುದು ನನ್ನ ಸೌಭಾಗ್ಯವೆಂದು ನಾನು ಭಾವಿಸುತ್ತೇನೆ. ನಿಮ್ಮೆಲ್ಲರಿಗೂ ಹಾಗೂ ಕರ್ನಾಟಕದ ಪ್ರಬುದ್ಧ ಜನತೆಗೂ ಸಹ ನನ್ನ ಶುಭ ಹಾರೈಕೆಗಳನ್ನು ತಿಳಿಸಬಯಸುತ್ತೇನೆ.

ಜೈ ಕರ್ನಾಟಕ, ಜೈ ಹಿಂದ್

(ಸದನವು ಮಧ್ಯಾಹ್ನ 12 ಗಂಟೆ 02 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 15 ನಿಮಿಷಗಳ ನಂತರ ಸಭೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 12 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು ವಿಧಾನಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : (ಅ) ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಆಂಗ್ಲದ ಭಾಷಾಂತರ.